ಐಕ್ಯರಂಗ

(ವಾರ ಪತ್ರಿಕೆ)

ಭಾರತ ಕಮ್ಯೂನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 5 ಸಂಚಿಕೆ 35 ಆಗಸ್ಟ್ 28, 1983 ಬೆಲೆ 60 ಪೈಸೆ

ರೆವಿನ್ಯೂ ಖಾತೆ ಆಮೂಲಾಗ್ರವಾಗಿ ಪುನರ್ರಚಿಸಲ್ಪಡಬೇಕು

ವಿಧಾನ ಸಭೆಯಲ್ಲಿ ಪಿ. ರಾಮಚಂದ್ರರಾವ್

ರೆವಿನ್ಯೂ ಖಾತೆ ಆಮೂಲಾಗ್ರವಾಗಿ ಪುನರ್ರಚಿಸಲ್ಪಡಬೇಕು ಎಂದು ಸಿ. ಪಿ. ಐ. (ಎಂ) ಶಾಸಕರಾದ ಪಿ. ರಾಮಚಂದ್ರರಾಯರು ವಿಧಾನ ಸಭೆಯಲ್ಲಿ ರೆವಿನ್ಯೂ ಖಾತೆಗೆ ಸಂಬಂಧಪಟ್ಟ ಬಜೆಟ್ ಚರ್ಚೆಯಲ್ಲಿ ಭಾಗವಹಿಸುತ್ತಾ ಜನತಾ ಸರಕಾರವನ್ನು ಒತ್ತಾಯಿಸಿದರು. ಹಾಗೆ ಮಾಡದೆ ಇದ್ದರೆ ಜನ ಸಾಮಾನ್ಯರಿಗೆ ಯಾವುದೇ ರೀತಿಯಲ್ಲಿ ಸಹಾಯ ಮಾಡುವುದು ಅಸಾಧ್ಯವೆಂದು ಸಭೆಗೆ ತಿಳಿಸಿದರು.

ಅವರ ಸುದೀರ್ಘ ಭಾಷಣದ ಮುಖ್ಯಾಂಶಗಳು ಹೀಗಿವೆ.

ಸಭೆಯಲ್ಲಿಟ್ಟ ವರದಿಯ ಪ್ರಕಾರ ಭೂ ಸುಧಾರಣೆಗಳ ಕಾರ್ಯಕ್ರಮವೆಲ್ಲವೂ ಮುಗಿದಿದೆ ಎಂಬ ಅಭಿಪ್ರಾಯವು ಜನತಾ ಸರಕಾರಕ್ಕಿದ್ದ ಹಾಗೆ ಕಾಣುತ್ತದೆ. ಇದು ತೀರಾ ತಪ್ಪು ಅಭಿಪ್ರಾಯ ಮಾತ್ರವಲ್ಲ ಬಹಳ ಅಪಾಯಕರ ಕೂಡಾ.

"ಸರಕಾರವೇ ಹೇಳುವ ಪ್ರಕಾರ ಇನ್ನೂ 37,858 ಅರ್ಜಿಗಳು ಹೈಕೋರ್ಟಿನಲ್ಲಿ ಕೊಳೆಯುತ್ತಿವೆ. ಈಗಾಗಲೇ ರಿಮಾಂಡ್ ಆದ ಕೇಸುಗಳು ಮತ್ತು ಈಗ ಇತ್ಯರ್ಥವಾಗದೆ ಇರುವ ಕೇಸುಗಳು ರಿಮಾಂಡ್ ಆದ ನಂತರ ಅವುಗಳ ಇತ್ಯರ್ಥವಾಗಬೇಡವೇ ?

"ಈಗಾಗಲೇ ಅರ್ಜಿ ಕೊಟ್ಟ ಕೃಷಿ ಕೂಲಿಗಾರರ ಕೇಸುಗಳಲ್ಲಿ ಇತ್ಯರ್ಥವಾದದ್ದು ಕೇವಲ 3000ದಷ್ಟು; ಇನ್ನು ಕೊಟ್ಟವರಲ್ಲೇ 6–7 ಸಾವಿರ ಕೇಸುಗಳ ಇತ್ಯರ್ಥಕ್ಕೆ ಬಾಕಿ ಇವೆ. ಹೀಗೆ ಅರ್ಜಿ ಕೊಡದವರ ಸಂಖ್ಯೆ ಇನ್ನೆಷ್ಟು ಸಾವಿರ ಇಲ್ಲ ?

"ಈಗಿರುವ ಭೂ ಪರಿಮಿತಿ ಕಲಮಿನನ್ವಯ ಗುರುತಿಸಿದ 2-3 ಲಕ್ಷ ಎಕರೆ ಭೂಮಿಯ ಪೈಕಿ ಕೇವಲ ಅರ್ಧದಷ್ಟು ಕೂಡ ಸರಕಾರ ಸ್ವಾಧೀನ ತೆಗೆದುಕೊಂಡಿಲ್ಲ. ಸ್ವಾಧೀನವಾದ ಭೂಮಿ ಕೂಡ ಪೂರ್ತಿಯಾಗಿ ಭೂ ರಹಿತರಲ್ಲಿ ಹಂಚಲ್ಪಡಲಿಲ್ಲ. ಹಾಗೆ ಭೂ ರಹಿತರಿಗೆ ಸಾಗುವಳಿ ಮಾಡಲು ಅವಶ್ಯಕವಾದ ಉಪಕರಣ, ಸಾಲ ಇತ್ಯಾದಿ ಸಹಾಯವನ್ನು ಕೊಟ್ಟಿದ್ದು ಕೂಡಾ ಅತ್ಯಲ್ಪ.

ವಿಲೇವಾರಿ ಆದ ಭೂಮಿಯನ್ನು ಸರ್ವೆ ಮಾಡಿ ಗಡಿ ಹಾಕಿಕೊಡುವುದಕ್ಕೆ ಸಾಕಷ್ಟು ತರಬೇತಿಯಾದ ಸಿಬ್ಬಂದಿ ಇಲ್ಲ. ಇದ್ದ ಸಿಬ್ಬಂದಿಗಳು ಕೆಲಸ ಮಾಡುವ ವಿಧಾನ ಎಲ್ಲರಿಗೂ ಗೊತ್ತಿದ್ದದ್ದೆ ಅಲ್ಲವೇ ?

"1961ರಿಂದಲೇ ಯಾಕೆ, 1958–59ರಿಂದಲೇ ಭೂಮಾಲಕರು ಒಂದಲ್ಲ ಒಂದು ಕಾರಣವನ್ನು ಹೇಳಿ ಬಡ ಒಕ್ಕಲುಗಳನ್ನು ಭೂಮಿಯಿಂದ ಹೊರಕಳಿಸಲ್ಪಟ್ಟವರು ಲಕ್ಷಾಂತರ ಸಂಖ್ಯೆ

(8ನೇ ಪುಟ ನೋಡಿ)

ಸೆಪ್ಟೆಂಬರ್ ೧ ರಂದು

'ಶಾಂತಿ ದಿನ' ಆಚರಿಸಿ

ಯೂರೋಪಿನಲ್ಲಿ ಡಿಸೆಂಬರ್ 1: 1983 ರಂದು ವಿನಾಶಕಾರೀ ಕ್ಷಿಪಣಿಗಳನ್ನು ಯುದ್ಧ ಹಡಗುಗಳನ್ನು ನೆಲೆಗೊಳಿಸುವ ತೀರ್ಮಾನದ ಹಿನ್ನೆಲೆಯಲ್ಲಿ ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆಯು (ಡಬ್ಲ್ಯೂಎಫ್‌ಟಿಯು) ಸೆಪ್ಟೆಂಬರ್ 1, 1983 ಅನ್ನು 'ಶಾಂತಿ ದಿನ' ವನ್ನಾಗಿ ಆಚರಿಸಿ ಅದನ್ನು ಅತ್ಯಂತ ಯಶಸ್ವಿಯಾಗಿಸಬೇಕೆಂದು ತನ್ನ ಸಂಘಟನೆಗೆ ಸೇರ್ಪಡೆಯಾಗಿರುವ ಸಂಘಟನೆಗಳಿಗೆ ಹಾಗೂ ಮಿತ್ರ ಸಂಘಟನೆಗಳಿಗೆ ಮನವಿಯನ್ನು ಕಳಿಸಿದೆ.

25-6-83 ರಂದು ನಡೆದ ಸಿ. ಐ. ಟಿ.ಯು. ನ ಕೇಂದ್ರ ಕಾರ್ಯಕಾರೀ ಸಮಿತಿ ಸಭೆಯು ಡಬ್ಲ್ಯೂ.ಎಫ್.ಟಿ.ಯು. ನ ಮನವಿಯನ್ನು ಕಾನ್ಪುರದಲ್ಲಿ ನಡೆದ ಸಿ. ಐ. ಟಿ. ಯು. ನ 5ನೆಯ ಸಮ್ಮೇಳನದ ತೀರ್ಮಾನದ ಆಧಾರದಲ್ಲಿ ಪರಿಗಣಿಸಿತು. ಸಾಮ್ರಾಜ್ಯಶಾಹೀ ಯುದ್ಧ ಪ್ರಯತ್ನಗಳ ವಿರುದ್ಧ ಮತ್ತು ಶಾಂತಿಗಾಗಿ ಹೋರಾಟವನ್ನು ಪ್ರಬಲಗೊಳಿಸುವ ಸಲುವಾಗಿ ಭಾರತದ ಕಾರ್ಮಿಕ ವರ್ಗವನ್ನು ಸಂಘಟಿಸುವ ಪ್ರಯತ್ನವನ್ನು ಮುಂದುವರಿಸುವ ಮೂಲಕ ತನ್ನ ಅಂತರಾಷ್ಟ್ರೀಯ ಹೊಣೆಯನ್ನು ನಿರ್ವಹಿಸುವ ತೀರ್ಮಾನವನ್ನು ಸಿ.ಐ.ಟಿ.ಯು. ನ 5ನೆಯ ಸಮ್ಮೇಳನ ಕೈಗೊಂಡಿತ್ತು.

ಆದ್ದರಿಂದ ಕೇಂದ್ರ ಕಾರ್ಯಕಾರೀ ಸಮಿತಿಯು ಸೆಪ್ಟೆಂಬರ್ 1ನ್ನು 'ಶಾಂತಿ ದಿನ'ವನ್ನಾಗಿ ಆಚರಿಸಲು ತೀರ್ಮಾನಿಸಿದೆ ಮತ್ತು ಕಾರ್ಮಿಕ ವರ್ಗದ ದೊಡ್ಡ ವಿಭಾಗವನ್ನು ಸಾಧ್ಯವಾದರೆ ದುಡಿಯುವ ವರ್ಗದ ಇತರ ವಿಭಾಗಗಳನ್ನು ಇದರಲ್ಲಿ ಒಳಗೊಳ್ಳುವಂತೆ ಮಾಡಿ 'ಶಾಂತಿ ದಿನ' ವನ್ನು ಅತ್ಯಂತ ಯಶಸ್ವಿಗೊಳಿಸಲು ನಾವು ಎಲ್ಲಾ ಪ್ರಯತ್ನಗಳನ್ನು ನಡೆಸಲು ಮುಂದಾಗಬೇಕಾಗಿದೆ.

ಆದ್ದರಿಂದ ಸೆಪ್ಟೆಂಬರ್ 1 ರಂದು 'ಶಾಂತಿ ದಿನ' ವನ್ನು ಆಚರಿಸಲು ತಕ್ಕ ಕ್ರಮಗಳನ್ನು ತೆಗೆದುಕೊಂಡು ಅದನ್ನು ಯಶಸ್ವಿಗೊಳಿಸಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ.

ಬಿ.ಟಿ. ರಣದಿವೆ
ಅಧ್ಯಕ್ಷರು
ಸಿ.ಐ.ಟಿ.ಯು.

ಸಂಪಾದಕೀಯ

ಪಾವಗಡ ಪ್ರಕರಣ ಪೋಲೀಸರ ಅದಕ್ಷತೆ

ಮೂವತ್ತಾರು ವರ್ಷಗಳ ಕಾಂಗ್ರೆಸ್ ಆಡಳಿತೆಯಲ್ಲಿ ಬೇರೂರಿದ್ದ ಪೋಲೀಸರ ಅದಕ್ಷತೆಯ ಮೂರ್ತ ಸ್ವರೂಪ ಪಾವಗಡದಲ್ಲಿ ಎದ್ದು ಕಾಣುತ್ತಿದೆ. ಮೂರ್ನಾಲ್ಕು ತಿಂಗಳಿಂದಲೂ ಪಾವಗಡ ತಾಲ್ಲೂಕಿನ ಹಳ್ಳಿಗಳಲ್ಲಿ ಚಿಕ್ಕ ಮಕ್ಕಳ ಕೊಲೆಯಾಗುತ್ತಿದ್ದರೂ ಕೂಡ "ಏನೂ ಅನಾಹುತ ಸಂಭವಿಸಿಲ್ಲ" ಎಂಬ ನಿರ್ಧಾರದಿಂದಲೇ ಗಾಢ ನಿದ್ರೆಯಲ್ಲಿರುವ ಪೋಲೀಸ್ ಖಾತೆಯ ವರ್ತನೆ ಖಂಡನೀಯ. ಅದರಂತೆಯೇ ಪೋಲೀಸರನ್ನೇ ಅವಲಂಬಿಸಿ, ಅವರ ವರದಿಗಳನ್ನಷ್ಟೇ ನಂಬಿ "ಮಕ್ಕಳ ಹತ್ಯೆಯಾಗಿರುವುದು ತೋಳಗಳಿಂದಲೇ" ಎಂಬ ದೃಢ ಅಭಿಪ್ರಾಯವನ್ನು ವ್ಯಕ್ತಮಾಡಿರುವ ಮುಖ್ಯ ಮಂತ್ರಿಯಾಗಿ ಗೃಹ ಶಾಖೆಯನ್ನೂ ಹೊಂದಿರುವ ರಾಮಕೃಷ್ಣ ಹೆಗಡೆಯವರ ಹೇಳಿಕೆಯೂ ಅಕ್ಷಮ್ಯ. ಅದೂ ಕೂಡ ಅಂಥ ಹೇಳಿಕೆ ವಿಧಾನ ಸಭೆಯಲ್ಲಿ. ಇಂಥ ಹೇಳಿಕೆಗೆ ಅವಕಾಶ ಮಾಡಿಕೊಟ್ಟ ವಿರೋಧ ಪಕ್ಷಗಳ ವರ್ತನೆಯೂ ಸರಿಯಿಲ್ಲವೆಂದೂ ಹೇಳಬೇಕು. ಪಾವಗಡ ತಾಲ್ಲೂಕಿನಲ್ಲಿ ಚಿಕ್ಕ ಮಕ್ಕಳ ಕೊಲೆಯಾಗುತ್ತಿದೆಂಬ ದಾರುಣ ಕತೆ ದಿನನಿತ್ಯ ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದರೂ, ಕೂಡ, ಅದಕ್ಕೆಲ್ಲ ತೋಳಗಳೇ ಕಾರಣವೆಂಬ ವದಂತಿ ಪ್ರಸರಿಸುತ್ತಿದ್ದಂತೆಯೇ ಎರಡೇ ಕಾಲಿನ ತೋಳಗಳೂ ಕಾಣಸಿವೆಂದು ತಿಳಿದು ಬಂದಾಗ ಅದರ ಗೂಢಾರ್ಥವನ್ನು ಕಂಡು ಹಿಡಿಯುವ ಯಾವ ಪ್ರಯತ್ನವನ್ನು ಜನತಾ ಸಹಕಾರವಾಗಲೀ, ವಿರೋಧ ಪಕ್ಷಗಳಾಗಲೀ ಮಾಡದಿರುವುದು ಅತ್ಯಂತ ಆಶ್ಚರ್ಯಕರ.

ಪಳವಳ್ಳಿಯ ಹೊಲದಲ್ಲಿ ಖತೀಜಾಬೀಯ ಮಗ ರಶೀದನನ್ನು ತೋಳರೂಪಿ ಮಾನವರು ಎತ್ತಿಕೊಂಡು ಹೋದರೆಂಬ ಸುದ್ದಿ ಬಂದ ನಂತರವಾದರೂ ಈ ಆಶ್ಚರ್ಯಕರ ಘಟನೆಯ ನಿಜ ಸಂಗತಿಯನ್ನು ತಿಳಿದುಕೊಳ್ಳುವ ಆಕಾಂಕ್ಷೆ ಸರಕಾರಕ್ಕಾಗಲೀ ಪೋಲೀಸ್ ಖಾತೆಗಾಗಲೀ ಉಂಟಾದಂತೆ ಕಂಡು ಬರುವುದಿಲ್ಲ. ಹಿಂದಿನ ಆಡಳಿತದಲ್ಲಿ ರೈತ, ಕಾರ್ಮಿಕ, ವಿದ್ಯಾರ್ಥಿಗಳ ಮೇಲೆ ಕಂಡಲ್ಲಿ ಗುಂಡು ಹೊಡೆಯುವ ಚಟವನ್ನು ಹೊಂದಿದ ಹಾಗೆಯೇ ಈಗ ಜನತಾ ಸರಕಾರ ಅಧಿಕಾರದಲ್ಲಿದ್ದಾಗ್ಯೂ ಕೂಡ ಕಾರ್ಮಿಕರು ಮುಷ್ಕರ ಹೂಡುತ್ತಾರೆಂಬ ವಾಸನೆ ಮೂಗಿಗೆ ತಾಗಿದುತೆಯೇ ಪ್ರತಿಬಂಧಕಾಜ್ಞೆಗಳನ್ನು ಹೊರಡಿಸುವ ಪೋಲೀಸ್ ಖಾತೆ ಗ್ರಾಮಾಂತರ ಪ್ರದೇಶವಾದ ಪಾವಗಡದ ನಿರಪರಾಧಿ ತಾಯಂದಿರ ಹಸುಗೂಸುಗಳು ಯಾವುದೋ ಶಕ್ತಿಗೆ ಬಲಿಯಾಗುತ್ತಿರುವಾಗ, ಮಿಂಚಿನ ವೇಗದಿಂದ ಅದರ ಒಳಗುಟ್ಟನ್ನು, ನಿಗೂಢತೆಯನ್ನು ಕಂಡು ಹಿಡಿಯಬೇಕೆಂಬ ಆತುರತೆ, ನಿಷ್ಠೆ ಇವರಲ್ಲಿಲ್ಲದಿರುವುದು ಈ ಖಾತೆಯಲ್ಲಿ ಮಾನವೀಯತೆ ಎಂಬುದೇ ಇಲ್ಲವೇ ಎಂಬ ಸಂಶಯ ಉಂಟಾಗುತ್ತದೆ.

ನೌಕರದಾರ ವರ್ಗಕ್ಕೆ ಯಾವ ಸೈದ್ಧಾಂತಿಕ ಶಿಕ್ಷಣವೂ ಇಲ್ಲದಿರುವುದರಿಂದಲೇ ಬದಲಾಗುತ್ತಿರುವ ವ್ಯವಸ್ಥೆಯನ್ನು ಅರ್ಥಮಾಡಿಕೊಳ್ಳುವುದರಲ್ಲಿ ವಿಫಲರಾಗುತ್ತಾರೆ. ಆಡಳಿತ ಪಕ್ಷ ಬದಲಾವಣೆಯಾದರೂ ಮಾಡುವ ಪ್ರಯತ್ನ ಕೂಡ ಹೊಸ ಸರಕಾರದಿಂದ ಆಗುತ್ತಿಲ್ಲ. ಆದ್ದರಿಂದ ಇವರಲ್ಲಿ ಯಾವ ಬದಲಾವಣೆಯೂ ಆಗಿರುವುದಿಲ್ಲ.

ಪಾವಗಡದ ದಾರುಣ ಘಟನೆಗಳಲ್ಲಿ ರಾಜಕೀಯವಿದೆ, ಮೂಢನಂಬಿಕೆಗಳ ಕೈವಾಡವೂ ಇರಬಹುದೆಂಬ ಸಂಶಯಾತ್ಮಕ ವದಂತಿಗಳು ಹಬ್ಬಿವೆ. ಎರಡು ಕಾಲುಗಳ ವೇಷಧಾರಿ ಪ್ರಾಣಿ ಸುಲ್ತಾನ ಬತ್ತೇರಿ ಗುಡ್ಡವನ್ನು ಸೇರಿಕೊಂಡಿತೆಂಬ ನಿಜ ಸಂಗತಿ ತಿಳಿದಾಗಲೂ ಜನರಲ್ಲುಂಟಾಗಿರುವ ಭೀತಿಯ, ಗೊಂದಲದ, ಆಕ್ರೋಶದ ಒಂದಂಶವೂ ಪೋಲೀಸ್ ಖಾತೆಯನ್ನಾಗಲೀ ಸರಕಾರವನ್ನಾಗಲೀ ಅಲುಗಾಡಿಸದಿರುವುದು ಆಶ್ಚರ್ಯದ ಸಂಗತಿ.

ಪಾವಗಡದಲ್ಲಿ ಮಕ್ಕಳ ಕೊಲೆಗೆ ಕಾರಣೀ ಭೂತವಾದ ಅದೃಶ್ಯ ಶಕ್ತಿಯ ಶೋಧನೆಯಾಗಲೇಬೇಕು. ಇದಕ್ಕಾಗಿ ಸರಕಾರದ ದೃಢ ನಿಲುವು, ಪೋಲೀಸರ ಚಾಣಾಕ್ಷತೆಯ ಪರೀಕ್ಷೆ ಇದರಲ್ಲಡಗಿದೆ. ಪೋಲೀಸರ ಕೈವಾಡ, ನಿಷ್ಕಾಳಜಿ ಇದರಲ್ಲಿ ಸೇರಿಕೊಂಡಿದೆಂಬ ದೂರು ಜನರಿಂದ ಬಂದಿದೆ. ಹಾಗಿರುವಾಗ ರಾಮಕೃಷ್ಣ ಹೆಗಡೆಯವರು ಸ್ವತಃ ಮುಖಂಡತ್ವವಹಿಸಿ, ಪಾವಗಡದಲ್ಲಿ ನೆಲೆಸಿ, ಅದೃಶ್ಯ ಶಕ್ತಿಯನ್ನು ಕಂಡು ಹಿಡಿಯುವುದು ಅತ್ಯಗತ್ಯ. ಇದನ್ನು ಅತ್ಯಂತ ತುರ್ತಿನ ಕ್ರಮವೆಂದು ಪರಿಗಣಿಸಲೇಬೇಕು. ರಾಮಕೃಷ್ಣ ಹೆಗಡೆಯವರು ಈ ನಿಗೂಢ ಸಮಸ್ಯೆಯನ್ನು ಕಂಡು ಹಿಡಿಯುವುದರಲ್ಲಿ ಅದನ್ನು ಬಯಲಿಗೆಳೆಯುವುದರಲ್ಲಿ ಜನರಿಗೆ ನಿಜ ಸಂಗತಿ ತಿಳಿಸುವುದರಲ್ಲಿ ಅವರಲ್ಲಿ ವಿಶ್ವಾಸ, ನಂಬಿಕೆ ಉಂಟುಮಾಡುವುದರಲ್ಲಿ ಮುಂದಾಗುತ್ತಾರೆಂದು ಆಶಿಸೋಣ.

ಈ ಕಾರ್ಯದಲ್ಲಿ ನಾವು ಅವರಿಗೆ ಸಂಪೂರ್ಣ ಬೆಂಬಲ, ಸಹಕಾರ ನೀಡುತ್ತೇವೆ.

ರಾಜ್ಯದ ವಿವಿಧ ಭಾಗಗಳಲ್ಲಿ

ಯಶಸ್ವಿ ಬೆಲೆ ಏರಿಕೆ ವಿರೋಧಿ ದಿನಾಚರಣೆ

ಜೀವನಾವಶ್ಯಕ ವಸ್ತುಗಳ ಬೆಲೆಗಳು ವಿಪರೀತವಾಗಿ ಏರುತ್ತಿರುವುದನ್ನು ಪ್ರತಿಭಟಿಸಿ ಹಾಗೂ ಅಕ್ಕಿ, ಸೀಮೆಎಣ್ಣೆ, ದವಸ ಧಾನ್ಯ ಮುಂತಾದವುಗಳನ್ನು ನ್ಯಾಯ ಬೆಲೆ ಅಂಗಡಿಗಳ ಮುಖಾಂತರ ಸಮರ್ಪಕವಾಗಿ ಸರಬರಾಜು ಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸುವ ಸಲುವಾಗಿ ರಾಜ್ಯಾದ್ಯಂತ ದಿನಾಂಕ ೧೧-೮-೧೯೮೩ ರಂದು ಬೆಲೆ ಏರಿಕೆ ವಿರೋಧಿ ದಿನಾಚರಣೆ ಆಚರಿಸಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕರ್ನಾಟಕ ರಾಜ್ಯ ಸಮಿತಿ ನೀಡಿದ ಕರೆಗೆ ಓಗೊಟ್ಟು ಪಕ್ಷದ ವಿವಿಧ ಪ್ರದೇಶಗಳ ಘಟಕಗಳು ನಡೆಸಿದ ಮೆರವಣಿಗೆ, ಧರಣಿ ಮುಷ್ಕರ, ಮನವಿ ಅರ್ಪಣೆ ಮುಂತಾದ ಕಾರ್ಯಕ್ರಮಗಳ ವಿವರಗಳನ್ನು ಇಲ್ಲಿ ಕೊಡುತ್ತಿದ್ದೇವೆ.

ಮೂಡಿಗೆರೆ

ದಿನಾಂಕ 11-8-83ರಂದು ಬೆಲೆ ಏರಿಕೆ ವಿರೋಧಿ ದಿನಾಚರಣೆಯನ್ನು ಆಚರಿಸಬೇಕೆಂಬ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ತೀರ್ಮಾನದಂತೆ ಸಿ ಪಿ ಐ (ಎಂ) ಮೂಡಿಗೆರೆ ತಾಲ್ಲೂಕು ಸಮಿತಿಯಿಂದ ನೂರಕ್ಕಿಂತಲೂ ಹೆಚ್ಚು ಕಾರ್ಯಕರ್ತರು ನಗರದ ಬೀದಿ ಬೀದಿಗಳಲ್ಲಿ ಮೆರವಣಿಗೆ ಹೋಗಿ ಬೆಲೆ ಏರಿಕೆ ವಿರೋಧಿ ಘೋಷಣೆ, ಕೇಂದ್ರ ಸರ್ಕಾರದ ಮಲತಾಯಿ ಧೋರಣೆ ವಿರುದ್ಧ ಗ್ರಾಮಾಂತರ ಪ್ರದೇಶದಲ್ಲಿ ಪಡಿತರ ಪದ್ಧತಿ ಜಾರಿಯಾಗಬೇಕು ಇತ್ಯಾದಿ ಘೋಷಣೆಗಳೊಂದಿಗೆ ತಹಸೀಲ್ದಾರ್ ರವರ ಮುಖಾಂತರ ರಾಜ್ಯದ ಮುಖ್ಯಮಂತ್ರಿಯವರಿಗೆ ಒಂದು ಮನವಿ ಪತ್ರ ಅರ್ಪಿಸಲಾಯಿತ.

ಈ ಬೆಲೆ ಏರಿಕೆ ವಿರೋಧಿ ಚಳುವಳಿಯ ಧರಣಿ ಸತ್ಯಾಗ್ರಹ ನೇತೃತ್ವವನ್ನು ಸಿ ಪಿ ಐ (ಎಂ) ಮೂಡಿಗೆರೆ ಶಾಖೆಯ ಕಾರ್ಯದರ್ಶಿ ಎಸಿ ಕೇಶವ ಕೆ ಪಿ ಪಿ ಡಬ್ಲ್ಯೂ ಯೂನಿಯನ್ ಸಹಕಾರ್ಯದರ್ಶಿ ಜಿ ಎಸ್ ರಾಘವೇಂದ್ರ ಕುದುರೆಮುಖ ಲೇಬರ್ ಕಾಲೊನಿ ಕಾರ್ಮಿಕ ಸಂಘದ ಅಧ್ಯಕ್ಷರಾದ ಕೆ ಟಿ ರಾಘವೇಂದ್ರ ಕರ್ನಾಟಕ ಪ್ರಾಂತ್ಯರೈತಸಂಘದ ಎಸ್ ಪಿ ಪ್ರಕಾಶ್ ರವರು ವಹಿಸಿದ್ದರು.

ಸಭೆಯನ್ನುದ್ದೇಶಿಸಿ ಎ ಸಿ ಕೇಶವ. ಜಿ ಎಸ್ ರಾಘವೇಂದ್ರ ಕೆ ಟಿ ರಾಘವೇಂದ್ರ ಹಾಗೂ ಎಸ್ ಪಿ ಪ್ರಕಾಶ್ ಮಾತನಾಡಿದರು.

ಸುಳ್ಯ :

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿ ಹಾಗೂ ದ. ಕ. ಜಿಲ್ಲಾ ಸಮಿತಿ ನೀಡಿದ ಕರೆಯ ಮೇರೆಗೆ ತಾ. 11-8-83ರಂದು ಸುಳ್ಯದಲ್ಲಿ ಬೆಲೆಯೇರಿಕೆ ವಿರೋಧಿ ಕಾರ್ಯಕ್ರಮದ ಅಂಗವಾಗಿ ಸುಳ್ಯ ತಾಲ್ಲೂಕು ಆಫೀಸಿನಲ್ಲಿ ಪಿಕೆಟಿಂಗ್ ನಡೆಸಲಾಲಾಯಿತು.

ಜಡಿಮಳೆ ಸುರಿಯುತ್ತಿದ್ದರೂ ಸುಳ್ಯ ತಾಲ್ಲೂಕಿನ ಮೂಲೆ ಮೂಲೆಯಿಂದ ರೈತ ಕಾರ್ಮಿಕರು ಬಂದು ಬೃಹತ್ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಪಿಕೆಟಿಂಗ್ ಕಾರ್ಯಕ್ರಮಕ್ಕೆ ಕಾರ್ಯಕರ್ತರನ್ನು ಗ್ರೂಪ್ ಮಾಡಿ ಕಳುಹಿಸಲಾಗಿತ್ತು. ತಾಲ್ಲೂಕಿನ ಬೇರೆ ಬೇರೆ ಕಡೆಯಿಂದ ಬಂದ ಸುಮಾರು 750 ಮಂದಿಗಿಂತಲೂ ಹೆಚ್ಚು ಗಂಡಸರು ಹಾಗೂ ಸುಮಾರು 100 ಕ್ಕಿಂತಲೂ ಹೆಚ್ಚು ಹೆಂಗಸರು ಪಾಲ್ಗೊಂಡಿದ್ದರು. ಪಿಕೆಟಿಂಗ್ ಕಾರ್ಯಕ್ರಮ ಯಶಸ್ವಿಯಾಗಿ ನಡೆದಿದ್ದು : ಸುಳ್ಯ ಪೋಲಿಸ್ ಸ್ಟೇಶನ್ ಹಾಗೂ ಸುಳ್ಯ ಸಿ. ಎ. ಬೇಂಕಿನ ರೆಸ್ಟ್ ಹೌಸ್‌ನಲ್ಲಿ ಬಂಧನಕ್ಕೊಳಗಾದ ಕಾರ್ಯಕರ್ತರನ್ನು ಇರಿಸಿಕೊಳ್ಳಲು ಸ್ಥಳಾವಕಾಶವೇ ಇಲ್ಲದಾಗಿತ್ತು.

ಪಿಕೆಟಿಂಗ್‌ನ ಗ್ರೂಪ್‌ಗಳ ನಾಯಕತ್ವವನ್ನು ಕಾ. ಕೆ. ಸೂರ್ಯನಾರಾಯಣ ಭಟ್, ಕಾ॥ ಕೆ. ಮೋನಪ್ಪ ಗೌಡ ಕಾ. ರಾಸಯ್ಯ. ಕಾ. ಪಿ. ಕೆ. ಮೂಸಾ, ಕಾ। ಎ. ಜಯರಾಮ ಕಾ. ಪಿ. ಕೃಷ್ಣ. ಕಾ. ನಾರಾಯಣ ಪಾಟಾಳಿ, ಕಾ. ಕುಂಞಿಕಣ್ಣ ಹಾಗೂ ಕಾ. ಭಾಸ್ಕರರಾವ್. ಕಾ. ಬಾಲಕೃಷ್ಣ ಗೌಡ ಹಾಗೂ ಇತರರು ವಹಿಸಿಕೊಂಡಿದ್ದರು. ಪಿಕೆಟಿಂಗ್ ಯಶಸ್ವಿಯಾಗಿ, ತಾಲ್ಲೂಕು ಆಫೀಸಿನ ಯಾವುದೇ ಕೆಲಸ ಕಾರ್ಯಗಳು ನಡೆದಿರಲಿಲ್ಲ.

ತುಮಕೂರು :

ದಿ. 22-8-83ರಂದು ನಗರದಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ನೂರಾರು ಮಂದಿ ಕಾರ್ಯಕರ್ತರು ಮಹಿಳಾ ಕಾರ್ಮಿಕರನ್ನೊಳಗೊಂಡು ಕೆಂಬಾವುಟಗಳನ್ನು ಹಿಡಿದು ಆಹಾರ ಧಾನ್ಯಗಳ ಬೆಲೆಗಳು ಇಳಿಯಲಿ! ಹೋಟೆಲ್‌ಗಳಲ್ಲಿ ತಿಂಡಿ ತಿನಸುಗಳು ಬೆಲೆಗಳು ಇಳಿಯಲಿ! ಸಿ.ಐ.ಟಿ.ಯು. ಜಿಂದಾಬಾದ್ ! ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಕ್ಕೆ ಜಯವಾಗಲಿ! ಎಂಬ ಘೋಷಣೆಗಳನ್ನು ನಗರದ ಪ್ರಮುಖ ಬೀದಿಗಳಲ್ಲಿ ಕೂಗುತ್ತಾ ಜಿಲ್ಲಾ ಕಚೇರಿಗೆ ತೆರಳಿ ಮನವಿ ಪತ್ರವನ್ನು ಜಿಲ್ಲಾಧಿಕಾರಿಗಳಿಗೆ ಅರ್ಪಿಸಿದರು.

ಜಿಲ್ಲಾಧಿಕಾರಿಗಳ ಕಛೇರಿಯ ಆವರಣದಲ್ಲಿ ಕಾರ್ಮಿಕರನ್ನು ಉದ್ದೇಶಿಸಿ ಕಾಮ್ರೇಡರುಗಳಾದ, ಹೆಚ್. ಸಿ. ಚನ್ನಪ್ಪ, ಪೀರ್‌ಸಾಬ್, ಹಾಗೂ ಎಸ್. ಎಫ್. ಐ. ಮುಖಂಡರಾದ ಆರ್. ರವೀಂದ್ರನಾಯಕ್‌ರವರುಗಳು ಮಾತನಾಡಿ ಭೂ ಮಾಲೀಕ-ಬಂಡವಾಳ ಶಾಹೀ ಸರಕಾರಗಳು ಆಹಾರ ಧಾನ್ಯಗಳ ಬೆಲೆಗಳನ್ನು ಹೆಚ್ಚಿಸಿರುವುದನ್ನು ಖಂಡಿಸಿದರು.

ಸಿ.ಪಿ.ಐ.(ಎಂ) ನ ಮುಖಂಡರುಗಳಾದ ಕಾಮ್ರೇಡ್ ಕೆ. ಆರ್. ನಾಯಕ್, ಟಿ. ಕೆ. ಗೋವಿಂದರಾಜು, ಟಿ ಎಲ್. ತಿಮ್ಮಪ್ಪ, ವದೂದ್, ರಜಿಯಾ ಬೇಗಂರವರುಗಳು ಜಿಲ್ಲಾಧಿಕಾರಿಗಳ ಸಹಾಯಕ ಅಧಿಕಾರಿಗಳೊಡನೆ ಮಾತನಾಡಿ ಕಾಳಸಂತೆಕೋರರ ಮೇಲೆ ಕಾನೂನಿನ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದೂ, ನಿವೇಶನ ರಹಿತ ಜನರಿಗೆ ನಿವೇಶನಗಳನ್ನು ನೀಡಬೇಕೆಂದು ಒತ್ತಾಯಿಸಿದರು. ಜಿಲ್ಲಾ ಸಹಾಯಕ ಅಧಿಕಾರಿಗಳು ಸಿ.ಪಿ.ಎಂ. ಮುಖಂಡರೊಡನೆ ಮಾತನಾಡಿ ಸೂಕ್ತ ಕ್ರಮ ತೆಗೆದುಕೊಳ್ಳುವುದಾಗಿ ಭರವಸೆ ನೀಡಿದ್ದಾರೆ.

ಆಳಂದ :

ಜೀವನಾವಶ್ಯಕ ವಸ್ತುಗಳ ಬೆಲೆ ಏರಿಕೆಯ ವಿರುದ್ಧ ಪ್ರತಿಭಟಿಸಿ ಆಳಂದ ತಾಲೂಕಿನ ಅನೇಕ ಹಳ್ಳಿಗಳಿಂದ ಕಾಲುನಡಿಗೆಯ ಜಾತದಲ್ಲಿ ಬಂದ ಸುಮಾರು 200ಕ್ಕೂ ಹೆಚ್ಚು ರೈತರು ತಹಶೀಲ ಕಛೇರಿಯ ಎದುರು ನಾಲ್ಕು (4) ಗಂಟೆಗಳ ಕಾಲ ಧರಣಿ ನಡೆಸಿದರು.

ಪ್ರತಿಯೊಂದು ಹಳ್ಳಿಗಳಿಂದ ಬಂದ ರೈತರು ಮುಖ್ಯವಾಗಿ ತಮ್ಮ ಊರಿಗೆ ಬಸ್ಸು ರಸ್ತೆಯ ಅನುಕೂಲ ಕುಡಿಯುವ ನೀರಿನ ವ್ಯವಸ್ಥೆ, ಕಡಿಮೆ ದರದಲ್ಲಿ ಗೊಬ್ಬರ ಮತ್ತು ಕ್ರಿಮಿ ಕೀಟ ಔಷಧಿಗಳ ಪೂರೈಕೆ, ರೈತ ಬೆಳೆದ ಬೆಳೆಗಳಿಗೆ ಯೋಗ್ಯ ಬೆಲೆ ಮತ್ತು ಬೆಳೆಗಳ ಮಾರಾಟ ವ್ಯವಸ್ಥೆಯನ್ನು ಸರಕಾರವೇ ವಹಿಸಿಕೊಳ್ಳಬೇಕೆಂದು ಒತ್ತಾಯಿಸಿ ಪಟ್ಟಣದ ಮುಖ್ಯ ಬೀದಿಗಳಲ್ಲಿ ದಿನಾಂಕ 11-8-83 ರಂದು ಸುರಿಯುತ್ತಿದ್ದ ಮಳೆಯಲ್ಲಿ ಘೋಷಣೆಗಳನ್ನು ಕೂಗುತ್ತ ತಹಶೀಲ ಕಛೇರಿಗೆ ನಡೆದು ಬಂದರು.

ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿಯು ನೀಡಿದ ಕರೆಯ ಮೇರೆಗೆ ಆಳಂದ ತಾಲ್ಲೂಕು ಘಟಕವು ಆಗಸ್ಟ್ 10 ರಿಂದ ಅಂಬಲಗಾದಿಂದ ಆಳಂದದವರೆಗೆ ಕಾಲು ನಡುಗೆಯ ಜಾತದಲ್ಲಿ ತಹಶೀಲ ಕಛೇರಿಗೆ ಹೋಗಿ ಧರಣಿ ನಡೆಸುವ ನಿರ್ಣಯ ತೆಗೆದುಕೊಳ್ಳಲಾಗಿತ್ತೆಂದು ಅಧ್ಯಕ್ಷ, ಮೇಘರಾಜ ಕಠಾರೆ, ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಂಬಲಗಾ ತಾಂಡಾ, ಅಂಬಲಗಾ, ಲೆಂಗಟಿ, ಕುದಮುಗ, ಕಲಕುಟಗಿ, ಮುಗಳಿ, ಸಲಗರ, ಮುದ್ದಡಗಾ, ಕಮಲಾನಗರ, ಕರಹರಿ, ಹಳ್ಳಿಗಳಿಂದ ರೈತ ಪ್ರತಿನಿಧಿಗಳು ಜಾತಾ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ತಹಶೀಲ ಕಛೇರಿಯ ಎದುರು ನಾಲ್ಕು(4) ಗಂಟೆಗಳ ಕಾಲ ಧರಣಿ ನಡೆಸಿದ ನಂತರ ತಹಶೀಲ್ದಾರರು ರೈತ ಮುಖಂಡರನ್ನು ಚರ್ಚೆಗೆ ಆಹ್ವಾನಿಸಿದರು, ಲೆಂಗಟಿಯಿಂದ ಹನುಮಂತರಾಯ ಲಾಡವಂತ ಭೀಮರಾವ್ ಕೊಳ್ಳೂರ ಮುದ್ದಡಗಾದಿಂದ ಚಂದ್ರಕಾಂತ ಕರಹರಿ, ಬಸವರಾಜ ಪಾಟೀಲ, ಅಂಬಲಗಾದಿಂದ ಮೇಗರಾಜ ಕಠಾರೆ, ಕಲ್ಲಪ್ಪಾ ಚೀಲೆ, ಚಂದ್ರಶೇಖರ ಸಿದ್ರಾಮಪ್ಪಾ ಚಿಂಚೋಳಿ ಚಂದ್ರಶೇಖರ ಶೆಳಕೆ, ಮತ್ತು ಭೋಜು ನಾಯಕ, ಕುದುಮುಡದಿಂದ ಬಾಬುರಾವ್ ಧೋತರೆ, ನಾಗಪ್ಪಾ ಖೋಪಡೆ, ನೀಲಕಂಠರಾವ್ ಪಾಟೀಲ ಕಲ್ಕುಟಕಿ ಇಂದ ನಾಗಣ್ಣಾ ಕಾಳಗಿ, ಹನುಮಂತರಾವ್ ಪಾಟೀಲ ಮುಗಳಿಯಿಂದ ಈರಪ್ಪಾ ಪೂಜಾರಿ, ಸಿದ್ರಾಮಪ್ಪಾ ಕೋಳಿ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದರು. ಅನೇಕ ಸ್ಥಳೀಯ ಸಮಸ್ಯೆಗಳನ್ನು ಮತ್ತು ಸೇಕ್-ಸಿಂಧಿ ಜಮೀನುಗಳ ಪಟ್ಟಾ ರಿಗ್ರ್ಯಾಂಟ್ ಮಾಡುವದಾಗಿ ತಹಶೀಲ್ದಾರರು ಆಶ್ವಾಸನೆ ನೀಡಿದರು.

ಈ ಮೊದಲು ರೈತರನ್ನು ಉದ್ದೇಶಿಸಿ ಸುಭಾಷ್ ಬಾಣಿ ವಕೀಲರು ಮಾತನಾಡಿದರು ನಂತರ ರೈತರು ತಮ್ಮ ಸಮಸ್ಯೆಗಳನ್ನು ಬಗೆಹರಿಸಬೇಕೆಂದು ಪಿ.ಡಬ್ಲ್ಯೂ.ಡಿ., ಕೆ.ಇ.ಬಿ., ಬಿ.ಡಿ.ಓ., ಕಛೇರಿಗಳ ಎದುರು ಕೂಡಾ ಧರಣಿ ನಡೆಸಿದರು.

ಜೇವರ್ಗಿ :

ಜೇವರ್ಗಿ ತಾಲ್ಲೂಕಿನ ಸುಮಾರು 150ಕ್ಕೂ ಹೆಚ್ಚು ರೈತ ಕಾಯಕರ್ತರು ಬೆಲೆ ಏರಿಕೆಯನ್ನು ಪ್ರತಿಭಟಿಸಿ ಜೇವರ್ಗಿಯ ಮುಖ್ಯ ಬೀದಿಗಳಲ್ಲಿ ಘೋಷಣೆಗಳನ್ನು ಕೂಗುತ್ತ ಆಗಸ್ಟ್ 11 ರಂದು ಮೆರವಣಿಗೆ ನಡೆಸಿದರು.

ಗೊಬ್ಬರ ಮುಂತಾದ ಕೃಷಿ ಸಂಬಂಧಿ ಉಪಕರಣಗಳನ್ನು ನ್ಯಾಯ ಬೆಲೆಯ ಅಂಗಡಿಗಳ ಮೂಲಕ ವಿತರಣೆ ಮಾಡಬೇಕೆಂದು ರೈತ ಬೆಳೆದ ಬೆಲೆಗಳ ಮಾರಾಟ ವ್ಯವಸ್ಥೆಯನ್ನು ಸರಕಾರವೇ ವಹಿಸಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಕಲ್ಲಪ್ಪಾ ಕಿರಣಗಿ ಮೆರವಣಿಗೆಯ ನಂತರ ರೈತರನ್ನು ಉದ್ದೇಶಿಸಿ ಮಾತನಾಡುತ್ತ ಸರಕಾರವನ್ನು ಒತ್ತಾಯಿಸಿದರು.

ಈ ಮೊದಲು ತಹಶೀಲ್ದಾರ ಕಛೇರಿಯ ಎದುರು ಎರಡು (2) ಗಂಟೆಗಳ ಕಾಲ ರೈತರು ಧರಣಿ ನಡೆಸಿದ ನಂತರ ತಹಶೀಲ್ದಾರರು ರೈತರನ್ನು ಮಾತುಕತೆಗೆ ಕರೆದರು. ನಂತರ ತಹಶೀಲ್ದಾರರು ತಾಲ್ಲೂಕಿಗೆ ಸಂಬಂಧಪಟ್ಟ ಬೇಡಿಕೆಗಳನ್ನು ಈಡೇರಿಸುವದಾಗಿ ಭರವಸೆ ನೀಡಿದರು ಚರ್ಚೆಯಲ್ಲಿ ಕಲ್ಲಪ್ಪಾ ಕಿರಣಗಿ, ಅರುಣಕುಮಾರ ಮನೋಕರ, ವ್ಯಂಕೋಬರಾವ್ ವಾಗಣಗೇರಿ ಶರಣಯ್ಯ ಸ್ವಾಮಿ, ನಿಂಗಣ್ಣ ಮೋರಟಗಿ, ಸಾಯಬಣ್ಣಾ ಕೆಲ್ಲೂರ, ಸಂಭಾಪ ಸರಡಗಿ, ವೈ. ಎಸ್. ಪೋಲೀಸ್ ಪಾಟೀಲ ಶಾಂತಗೌಡ, ಬಂದಗಿ ಸಾಬ ಪಂಚನಾಳ, ಇವರು ಭಾಗವಹಿಸಿದರು.

ರಾಯಚೂರು :

ಸಿ. ಪಿ. ಐ. (ಎಂ) ರಾಜ್ಯ ಸಮಿತಿಯ ಕರೆಯ ಮೇರೆಗೆ, ರಾಯಚೂರು ಜಿಲ್ಲಾ ಸಮಿತಿಯ ನೇತೃತ್ವದಲ್ಲಿ 11-8-83ರಂದು ಮುಂಜಾನೆ ಹತ್ತು ಘಂಟೆಗೆ ಪಕ್ಷದ ಕಾರ್ಯಾಲಯದಿಂದ ನೂರಾರು ಕಾರ್ಯಕರ್ತರು ಮೆರವಣಿಗೆಯಲ್ಲಿ ತೆರಳಿ ನಗರದ ಮುಖ್ಯ ಬೀದಿಗಳಲ್ಲಿ ಹಾಯ್ದು ಜಿಲ್ಲಾಧಿಕಾರಿಯುವರಿಗೆ ಮನವಿಯನ್ನು ಸಲ್ಲಿಸಿದರು. ಕಾ। ಚಂದ್ರಶೇಖರ ಬಾಳೆ ಕಾ। ಪುರುಶೋತ್ತಮ ಕಲಾಲಬಂಡಿ ಹಾಗೂ ಕಾ। ಹರಿಣಿ ಕಕ್ಕೇರಿಯವರು ಜಿಲ್ಲಾಧಿಕಾರಿಯನ್ನು ಭೇಟಿಯಾಗಿ ಚರ್ಚಿಸಿದರು.

ಕೊನೆಯಲ್ಲಿ ಕಾ। ಪುರುಶೋತ್ತಮ ಕಲಾಲ ಬಂಡಿ, ಮೆರವಣಿಗೆ ಕಾರರನ್ನುದ್ದೇಶಿಸಿ, ಜಿಲ್ಲಾಧಿಕಾರಿಯವರ ಜೊತೆ ನಡೆದ ಚರ್ಚೆಯನ್ನು ವಿವರಿಸಿದರು.

ಉತ್ತರ ಕನ್ನಡ ಜಿಲ್ಲೆ

ಸಿ. ಪಿ. ಐ. (ಎಂ) ಕರ್ನಾಟಕ ರಾಜ್ಯ ಸಮಿತಿಯು ನೀಡಿದ ಕರೆಯ ಮೇರೆಗೆ ಸಿ. ಪಿ. ಐ. (ಎಂ) ನ ಉತ್ತರ ಕನ್ನಡ ಜಿಲ್ಲಾ ಸಮಿತಿ 11-8-83ರಂದು ಕಾರವಾರದಲ್ಲಿ ಬೆಲೆ ಏರಿಕೆ ವಿರೋಧಿ ದಿನವನ್ನು ಆಚರಿಸಿತು. ಸದಾಶಿವ ಗಢದಿಂದ ಮೆರವಣಿಗೆ ಹೊರಟು ಡೆಪ್ಯುಟಿ ಕಮಿಷನರ್ ಆಫೀಸಿನ ಎದುರು ಧರಣಿ ಸತ್ಯಾಗ್ರಹ ನಡೆಸಲಾಯಿತು. ನಂತರ ಜಿಲ್ಲಾಧಿಕಾರಿಗಳಿಗೆ ಮನವಿಯನ್ನು ಅರ್ಪಿಸಲಾಯಿತು.

ಮೆರವಣಿಗೆ ಹಾಗೂ ಧರಣಿ ಮುಷ್ಕರದ ನೇತೃತ್ವವನ್ನು ಪಕ್ಷದ ಉತ್ತರ ಕನ್ನಡ ಜಿಲ್ಲಾ ಮುಖಂಡರಾದ ಕಾ। ಎಂ. ಎಸ್. ಧಾರೇಶ್ವರ ಹಾಗೂ ಜಿಲ್ಲಾ ಕಾರ್ಯದರ್ಶಿ ಕಾ। ಮಂಜುನಾಥ ಪುಲಕರ್ ವಹಿಸಿದ್ದರು.

ಮೈಸೂರು :

ದಿನಾಂಕ 11-8-1983ರಂದು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ

(7ನೇ ಪುಟ ನೋಡಿ)

ಕರ್ನಾಟಕದ ಪ್ರಥಮ ಕಾಂಗ್ರೆಸ್ಸೇತರ ಸರಕಾರ ಅಭಿನಂದನಾರ್ಹ

–ಇ.ಎಂ.ಎಸ್.

ಈ ತಿಂಗಳ 19ರಂದು ಬೆಂಗಳೂರಿನಲ್ಲಿ ಸಿ.ಪಿ.ಐ.(ಎಂ) ಪ್ರಧಾನ ಕಾರ್ಯದರ್ಶಿ ಕಾಂ॥ ಇ.ಎಂ.ಎಸ್. ನಂಬೂದಿರಿಪಾಡ್ ಪತ್ರಿಕೆಗಳಿಗೆ ನೀಡಿದ ಹೇಳಿಕೆಯ ಪೂರ್ಣಪಾಠ ಹೀಗಿದೆ —

"ಕರ್ನಾಟಕದ ಜನತಾ ಸರ್ಕಾರ ಏಳು ತಿಂಗಳು ಪೂರ್ಣಗೊಳಿಸಿದ್ದಕ್ಕಾಗಿ ಮತ್ತು ಹಲವು ಉಪಚುನಾವಣೆಗಳಲ್ಲಿಯೂ, ಇತ್ತೀಚೆಗೆ ನಡೆದ ಕಾರ್ಪೊರೇಶನ್ ಹಾಗೂ ಪುರಸಭಾ ಚುನಾವಣೆಗಳಲ್ಲೂ ಮತದಾರರ ವಿಶ್ವಾಸ ಗಳಿಸಿದ್ದಕ್ಕಾಗಿ ಅಭಿನಂದನಾರ್ಹ.

ಎಲ್ಲರಿಗೂ ತಿಳಿದಿರುವಂತೆ, ಸರಕಾರದ ಮುಂದಿರುವ ಕಾರ್ಯಭಾರ ಯಾವ ರೀತಿಯಿಂದಲೂ ಸುಲಭವಾದದ್ದೇನೂ ಅಲ್ಲ. ಅದು ಸೋಲುಂಡ ಕಾಂಗ್ರೆಸ್ (ಐ) ನ ಬಲಿಷ್ಟ ವಿರೋಧವನ್ನು ಎದುರಿಸಬೇಕಾಗಿತ್ತು. ಸರಕಾರಕ್ಕೆ ಬೆಂಬಲ ನೀಡುತ್ತಿದ್ದ ಪಕ್ಷಗಳೊಳಗೂ ಸಮಸ್ಯೆಗಳಿದ್ದವು. ಹೀಗಿದ್ದಾಗ್ಯೂ ಸರಕಾರ ವಿಧಾನ ಸಭೆಯ ಉಪಚುನಾವಣೆಗಳ ಹಾಗೂ ಕಾರ್ಪೊರೇಶನ್/ಪುರಸಭಾ ಚುನಾವಣೆಗಳ ಪರೀಕ್ಷೆಯನ್ನು ಎದುರಿಸಿ ನಿಂತಿದೆ.

ಇದಕ್ಕೆ ಕಾರಣವೇನೆಂದರೆ, ಕೇಂದ್ರ ಸರ್ಕಾರದ ಧೋರಣೆಗಳು ಹೇರಿರುವ ಮಿತಿಗಳಿಗೊಳಪಟ್ಟಿದ್ದರೂ ಹಾಗೂ ರಾಜ್ಯದಲ್ಲೊಂದು ವಿದ್ವೇಶಕಾರೀ ವಿರೋಧವಿದ್ದರೂ, ಕರ್ನಾಟಕ ಸರಕಾರ ಚುನಾವಣಾ ಸಮಯದಲ್ಲಿ ಮತದಾರರಿಗಿತ್ತ ವಚನಗಳನ್ನು ಪಾಲಿಸಲು ತನ್ನಿಂದಾದ ಪ್ರಯತ್ನಗಳನ್ನೆಲ್ಲಾ ಮಾಡಿದೆ.

ಅಲ್ಲದೆ, ಹೆಗ್ಡೆ ಸರಕಾರ ತಾನು ಕಾಂಗ್ರೆಸ್(ಐ)ಗೆ ಪ್ರತಿಯಾಗಿ ಬೆಳೆಯುತ್ತಿರುವ ರಾಷ್ಟ್ರೀಯ ಪರ್ಯಾಯದ ಭಾಗವೆಂದು ಪರಿಗಣಿಸಿ ಈ ದಿಕ್ಕಿನಲ್ಲಿ ಸ್ಥೂಲವಾಗಿ ಏಕಾಭಿಪ್ರಾಯವಿರುವ ಕೆಲವು ಸೀಮಿತ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಎಲ್ಲಾ ಪ್ರತಿಪಕ್ಷಗಳನ್ನು ಒಗ್ಗೂಡಿಸಲು ಪ್ರಯತ್ನಿಸಿತು. ದಕ್ಷಿಣ ಭಾರತದ ಸೋದರ ಮುಖ್ಯಮಂತ್ರಿಗಳ ಸಮ್ಮೇಳನ ಹಾಗೂ ಕೇಂದ್ರ–ರಾಜ್ಯ ಸಂಬಂಧಗಳ ಕುರಿತು ವಿಚಾರ ಸಂಕಿರಣ ನಡೆಸಿ – ಎರಡನ್ನೂ ಬೆಂಗಳೂರಿನಲ್ಲಿ – ನಡೆಸುವಲ್ಲಿ ಮುಖ್ಯಮಂತ್ರಿಗಳು ಇಟ್ಟ ಮೊದಲ ಹೆಜ್ಜೆ ದೇಶವನ್ನು ಬಾಧಿಸುತ್ತಿರುವ ಕೆಲವು ಜ್ವಲಂತ ಸಮಸ್ಯೆಗಳ ಮೇಲೆ ಸಾರ್ವಜನಿಕ ಅಭಿಪ್ರಾಯ ಕ್ರೋಢೀಕರಿಸುವಲ್ಲಿ ನೆರವಾಗಿದೆ.

ಹೆಗಡೆ ಸರಕಾರ ಕೈಗೊಂಡ ಹಲವು ಕ್ರಮಗಳ ಬಗ್ಗೆ ವಿವಿಧ ಪಕ್ಷಗಳಿಗೆ ತಮ್ಮದೇ ಆದ ಅಭಿಪ್ರಾಯ ಇರಲು ಸಾಧ್ಯವಿದೆ.ಅಂತಹದನ್ನು ವಿಧಾನಮಂಡಲದ ಒಳಗಾಗಲೀ, ಹೊರಗಾಗಲೀ ಅಭಿವ್ಯಕ್ತಗೊಳಿಸಲು ನನ್ನ ಪಕ್ಷ ಖಂಡಿತವಾಗಿಯೂ ಹಿಂಜರಿದಿಲ್ಲ. ಮುಂದೆಯೂ ಹಿಂಜರಿಯುವುದಿಲ್ಲ. ಆದರೆ ಈ ರೀತಿ ಮತ ಭೇದಗಳನ್ನು ವ್ಯಕ್ತಗೊಳಿಸುವಾಗ ನಮ್ಮ ಪಕ್ಷ ಕರ್ನಾಟಕದ ಪ್ರಥಮ ಕಾಂಗ್ರೆಸ್ಸೇತರ ಸರಕಾರ ತನ್ನ ಒಳ್ಳೆಯ ಕೆಲಸ ಮುಂದುವರಿಸಲು ನೆರವಾಗುವಂತೆ ನೋಡಿಕೊಳ್ಳಲು ಸಾಧ್ಯವಿದ್ದುದನ್ನೆಲ್ಲಾ ಮಾಡುತ್ತದೆ. ಬೇರೆ ಪಕ್ಷಗಳೂ ಇದೇ ರೀತಿ ಮಾಡುತ್ತವೆ ಎಂದು ನಾನು ಆಶಿಸುತ್ತೇನೆ.

ರಾಷ್ಟ್ರೀಯ ಪರ್ಯಾಯ

ನಮ್ಮ ಪಕ್ಷಕ್ಕೆ ಜನತಾ ಪಕ್ಷದೊಂದಿಗೆ ಕೆಲವು ಅಂತರ್ರಾಷ್ಟ್ರೀಯ ಹಾಗೂ ರಾಷ್ಟ್ರೀಯ ಸಮಸ್ಯೆಗಳ ಬಗ್ಗೆ ಭಿನ್ನಾಭಿಪ್ರಾಯವಿದ್ದರೂ ಕರ್ನಾಟಕದಲ್ಲಿ ಮಾತ್ರವಲ್ಲ ಇತರ ಹಲವು ರಾಜ್ಯಗಳಲ್ಲೂ ಸಹಕಾರದ ಸಂಬಂಧ ಹೊಂದಿದೆ. ನಮ್ಮೆರಡು ಪಕ್ಷಗಳು, ಇತರ ಎಡ ಹಾಗೂ ಪ್ರಜಾಪ್ರಭುತ್ವವಾದಿ ಪಕ್ಷಗಳೊಂದಿಗೆ ಕಾಂಗ್ರೆಸ್ (ಐ)ನ ಪ್ರಜಾಪ್ರಭುತ್ವ ವಿರೋಧೀ ಧೋರಣೆಗಳ ವಿರುದ್ಧ ಹೋರಾಡಲು ಸಾಧ್ಯವಾಗುವಂತೆ ಸಹಕಾರದ ಈ ಸಂಬಂಧಗಳನ್ನು ಮುಂದುವರಿಸಲು ಪ್ರಯತ್ನಿಸುತ್ತೇವೆ.

ನಮ್ಮೆದುರಿನ ಹಾದಿ ತೊಂದರೆಗಳಿಂದ ಕೂಡಿದೆಯೆಂಬ ಪ್ರಜ್ಞೆ ನಮಗಿದೆ. ಕಾಂಗ್ರೆಸ್ (ಐ)ನ ಹಿತಾಸಕ್ತಿಗಳಿಗೆ ಅನುಕೂಲವಾಗುವಂತೆ ಪ್ರತಿಪಕ್ಷಗಳನ್ನು ವಿಭಜಿಸಿಡಲು ಪ್ರಯತ್ನಗಳು ನಡೆಯುತ್ತಿದೆ ಮಾತ್ರವಲ್ಲ "ಕಮ್ಯೂನಿಸ್ಟೇತರ ಪಕ್ಷಗಳು" ಎಂದು ಎನಿಸಿಕೊಂಡ ಪಕ್ಷಗಳ ಮೈತ್ರಿಕೂಟ ಸೇರಿಸಲೂ ಪ್ರಯತ್ನಗಳು ನಡೆಯುತ್ತಿವೆ. ಇವುಗಳಲ್ಲಿ ಮೊದಲು ಹೇಳಿದ ಪ್ರಯತ್ನಗಳು ಇನ್ನು ಒಂದೂವರೆ ವರ್ಷದೊಳಗೆ (ಅದರ ಮೊದಲೇ ಆಗದಿದ್ದರೆ) ನಡೆಯಲಿರುವ ಲೋಕಸಭಾ ಚುನಾವಣೆಗಳಲ್ಲಿ, 1952 ರಿಂದ ನಡೆದಿರುವಂತೆ, ಕಾಂಗ್ರೆಸ್(ಐ)ಕೇವಲ ಅಲ್ಪ ಮತಗಳನ್ನು ಗಳಿಸುವಲ್ಲಿ ಶಕ್ತವಾದರೂ, ಬಹುಸಂಖ್ಯೆಯ ಸ್ಥಾನಗಳನ್ನು ಗಳಿಸಿಕೊಳ್ಳಲು ಹಾದಿ ಸುಗಮ ಮಾಡಿಕೊಡುತ್ತವೆ. ಮೇಲೆ ಹೇಳಿದ ಎರಡನೇ ತರದ ಪ್ರಯತ್ನಗಳೂ ಕೂಡಾ ಕಾಂಗ್ರೆಸ್(ಐ) ಅನುಸರಿಸುವ ಜನವಿರೋಧೀ ಧೋರಣೆಗಳಿಗೆ ಪರ್ಯಾಯವಾದ ಜನಪ್ರಿಯ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಧೋರಣೆಗಳು ವಿಕಾಸಗೊಳ್ಳದಂತೆ ತಡೆದು ಅದೇ ಉದ್ದೇಶ ಸಾಧಿಸುತ್ತವೆ. ಈ ಎರಡನೇ ದಾರಿ ಅನುಸರಿಸುವವರೂ ಕೂಡಾ ಜನತಾ ಪಕ್ಷದ ಪ್ರೀತಿ ಗಳಿಸಲು ಪ್ರಯತ್ನಿಸುತ್ತಿದ್ದಾರೆ. "ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟ"ದ ಪ್ರವರ್ತಕರ ಹೇಳಿಕೆಗಳಿಂದ ಇದು ಸ್ಪಷ್ಟವಾಗುತ್ತದೆ.

ಶ್ರೀಲಂಕಾದ ಜನಾಂಗ ಸಮಸ್ಯೆ

ಸಿಂಹಳೀ ತೀವ್ರವಾದಿಗಳು ಯು. ಎನ್. ಪಿ. ಸರ್ಕಾರದ ಪೋಲಿಸ್ ಹಾಗೂ ಸೇನೆಯ ಬಹಿರಂಗ ಬೆಂಬಲದೊಂದಿಗೆ ನಡೆಸಿದ ಹಿಂಸಾತ್ಮಕ ಸಂಕುಚಿತವಾದೀ ಹಲ್ಲೆಗಳಿಗೊಳಗಾದ ಶ್ರೀಲಂಕಾ ತಮಿಳರಿಗೆ ನಮ್ಮ ಜನತೆಯ ಸೌಹಾರ್ದಭಾವ ವ್ಯಕ್ತಪಡಿಸುವಲ್ಲಿ ದೇಶದ ಎಲ್ಲಾ ರಾಜಕೀಯಪಕ್ಷಗಳು ಒಂದಾಗಿರುವುದು ನಮಗೆಲ್ಲಾ ತೃಪ್ತಿ ತರುವ ವಿಷಯ.

ನಮ್ಮ ಜನತೆಯ ಒಂದು ವಿಭಾಗದವರಲ್ಲಿ, ವಿಶೇಷವಾಗಿ ತಮಿಳುನಾಡಿನವರಲ್ಲಿ, ಭಾರತ ಹಾಗೂ ಸಂಯುಕ್ತ ರಾಷ್ಟ್ರಸಂಸ್ಥೆ ಮಧ್ಯ ಪ್ರವೇಶಿಸಬೇಕೆಂದು ಒತ್ತಾಯಿಸುವ ಮಟ್ಟದವರೆಗೂ ಹೋದವರಲ್ಲಿ ಇರುವ ತೀವ್ರ ಭಾವನೆಗಳನ್ನು ನಾವೆಲ್ಲಾ ಅರ್ಥಮಾಡಿಕೊಳ್ಳುತ್ತೇವೆ, ಆದರೂ ನಮ್ಮ ಪಕ್ಷ ಆರಂಭದಿಂದಲೇ ಶ್ರೀಲಂಕಾದ ಜನಾಂಗ ಸಮಸ್ಯೆ ಸಂಪೂರ್ಣವಾಗಿ ಆ ದೇಶದ ಜನರ ಆಂತರಿಕ ವ್ಯವಹಾರ ಎಂಬ ಅಭಿಪ್ರಾಯಪಟ್ಟಿತು. ವಿದೇಶಗಳಲ್ಲಿರುವ ಶ್ರೀಲಂಕಾ ಜನತೆಯ ಮಿತ್ರರು ಸಿಂಹಳೀ ಹಾಗೂ ತಮಿಳು ಗುಂಪುಗಳನ್ನು ಸಮೀಪ ತಂದು, ಶ್ರೀಲಂಕಾದ ಐಕ್ಯತೆ ಹಾಗೂ ಸಮಗ್ರತೆಯನ್ನು ಕಾಪಾಡಿಕೊಂಡು ಅದೇ ಸಮಯದಲ್ಲಿ ತಮಿಳರ ಮಾನವ ಹಕ್ಕುಗಳನ್ನು ರಕ್ಷಿಸಲು ಮಾರ್ಗೋಪಾಯಗಳನ್ನು ಕಂಡು ಹಿಡಿಯುವಲ್ಲಿ ನೆರವಾಗಬಹುದಷ್ಟೆ.

ಭಾರತ ಸರಕಾರ ಈ ದಾರಿ ಅಂಗೀಕರಿಸಿದೆ ಹಾಗೂ ಈ ಪ್ರಯತ್ನಗಳಲ್ಲಿ ಯಶಸ್ಸಿನ ಸಾಧ್ಯತೆ ಶ್ರೀಲಂಕಾ ಅಧ್ಯಕ್ಷರ ವಿಶೇಷ ರಾಯಭಾರಿಯವರ ದೆಹಲಿ ಭೇಟಿಯ ನಂತರ ಹೆಚ್ಚಿದೆ ಎಂದು ಗಮನಿಸಲು ನಮ್ಮ ಪಕ್ಷಕ್ಕೆ ಸಂತೋಷವಾಗುತ್ತದೆ. ಶ್ರೀಲಂಕಾದ ಜನತೆಯ ಮಿತ್ರನಾಗಿರುವ ಭಾರತದ ಪ್ರತಿಯೊಬ್ಬನೂ ಈ ಧೋರಣೆಯ ಅನುಷ್ಠಾನದಲ್ಲಿ ಸಹಕಾರ ನೀಡುವುದು ಆತನ ಜವಾಬ್ದಾರಿ ಎಂದು ನಾವು ಭಾವಿಸುತ್ತೇವೆ.

ಭಾರತದಲ್ಲಿರುವ ನಮಗೆ ಲಂಕಾದ ಘಟನೆಗಳು ಒಂದು ಮುನ್ನೆಚ್ಚರಿಕೆಯಾಗಬೇಕು. ಎರಡು ಜನಾಂಗೀಯ ಗುಂಪುಗಳ ಸಮಸ್ಯೆಯಲ್ಲಿ ಮುಳುಗಿದ ಶ್ರೀಲಂಕಾದಂತೆ ನಮಗೆ ಇನ್ನೂ ಹೆಚ್ಚು ಕ್ಲಿಷ್ಟವಾದ ಹಲವಾರು ಸಂಖ್ಯೆಯ ಜಾತಿಗಳು, ಧಾರ್ಮಿಕ, ಕೋಮುಗಳ ಬುಡಕಟ್ಟುಗಳು ಹಾಗೂ ಭಾಷಾ-ಸಾಂಸ್ಕೃತಿಕ ಕೋಮುಗಳ ಅಸ್ತಿತ್ವದ ಸಮಸ್ಯೆಯಿದೆ. ಈ ವಿವಿಧ ಗುಂಪುಗಳ ನಡುವಿನ ಸಂಬಂಧಗಳೂ ಕೂಡಾ ಶ್ರೀಲಂಕಾದ ಸಿಂಹಳೀ ಹಾಗೂ ತಮಿಳರ ನಡುವಿನ ಸಂಬಂಧಕ್ಕಿಂತ ಉತ್ತಮವೇನೂ ಆಗಿಲ್ಲ. ಈ ಯಾವುದರಿಂದಲೇ ಉಂಟಾಗುವ ಸಮಸ್ಯೆಗಳು ಭಯಾನಕ ಸ್ವರೂಪ ಪಡೆಯಲುಸಾಧ್ಯವೆಂಬುದನ್ನು ನಾವು ಹಲವಾರು ಸಂಖ್ಯೆಯ ಜಾತಿ ಕಲಹಗಳಲ್ಲಿ, ಕೋಮು ದಂಗೆಗಳಲ್ಲಿ, ಎಲ್ಲಕ್ಕೂ ಮಿಗಿಲಾಗಿ ಅಸ್ಸಾಂ ಹಾಗೂ ಪಂಜಾಬಿನಲ್ಲಿ ಇನ್ನೂ ಮುಂದುವರಿಯುತ್ತಿರುವ ಬಿಕ್ಕಟ್ಟಿನಲ್ಲಿ ನಾವು ನೋವಿನಿಂದ ಗಮನಿಸಿದ್ದೇವೆ,

ಪ್ರಗತಿಶೀಲರ ಕರ್ತವ್ಯ

ಇಷ್ಟೇ ಅಲ್ಲ, ಶ್ರೀಲಂಕಾದಲ್ಲಿರುವಂತೆ ಭಾರತದಲ್ಲೂ ಅಮೇರಿಕನ್ ಸಾಮ್ರಾಜ್ಯಶಾಹಿಯ ನಾಯಕತ್ವದಲ್ಲಿರುವ ಸಾಮ್ರಾಜ್ಯಶಾಹೀಶಕ್ತಿಗಳು ಇಂತಹ ಪ್ರತಿಯೊಂದು ಸಮಸ್ಯೆಯನ್ನು ವಿಭಾಜಕ ಚಳವಳಿಗಳನ್ನು ಬಲಪಡಿಸಲು ಬಳಸಿ ಆ ಮೂಲಕ ಭಾರತವನ್ನು ವಿಚ್ಛಿದ್ರಗೊಳಿಸಲು ಬಯಸುತ್ತಿದ್ದಾರೆ. ಭಾರತೀಯ ಜನತೆಯ ಐಕ್ಯತೆ, ದೇಶದ ಸಾರ್ವಭೌಮತೆ ಹಾಗೂ ಸ್ವಾತಂತ್ರ್ಯ, ಇಂದಿನಷ್ಟು ಅಪಾಯ ಹಿಂದೆಂದೂ ಎದುರಿಸಿರಲಿಲ್ಲ.

ಆದ್ದರಿಂದ ದೇಶದ ಎಲ್ಲಾ ಪ್ರಜಾಪ್ರಭುತ್ವವಾದಿ ಹಾಗೂ ಪ್ರಗತಿಶೀಲ ಶಕ್ತಿಗಳು ವಿಚ್ಛಿದ್ರಕಾರೀ ಶಕ್ತಿಗಳ ವಿರುದ್ಧ ಸಂಯುಕ್ತ ಹೋರಾಟ ನಡೆಸಿ ಭಾರತದ ಐಕ್ಯತೆ ಹಾಗೂ ಸಮಗ್ರತೆಯನ್ನು ಕಾಪಾಡುವುದು ಮಹತ್ವದ್ದಾಗಿದೆ. ಸ್ಥೂಲವಾಗಿ ಭಾಷಾ ನೀತಿಯ ಮೇಲೆ ಸಂಘಟಿತವಾದ ರಾಜ್ಯಗಳ ಸ್ವಯಮಾಧಿಕಾರದ ನ್ಯಾಯಬದ್ಧ ಆಕಾಂಕ್ಷೆಗಳು ಭಾರತದ ಐಕ್ಯತೆಯನ್ನು ಕಾಪಾಡಲು, ದೇಶವನ್ನು ಸಾಮ್ರಾಜ್ಯಶಾಹೀ ಆಕ್ರಮಣದಿಂದ ರಕ್ಷಿಸಲು, ಸಮಾಜವಾದಿ ಹಾಗೂ ತೃತೀಯ ಜಗತ್ತಿನ ದೇಶಗಳೊಂದಿಗೆ ಮಿತ್ರತ್ವದ ಹಾಗೂ ಸಹಕಾರದ ಸಂಬಂಧಗಳನ್ನು ಬಲಪಡಿಸಲು ಸಾಮ್ರಾಜ್ಯಶಾಹಿಯ ತಯಾರಿ ನಡೆಸುತ್ತಿರುವ ಅತ್ಯಂತ ವಿನಾಶಕಾರಿ ನ್ಯೂಕ್ಲಿಯರ್ ಯುದ್ಧದ ಹೋರಾಟದಲ್ಲಿ ತನ್ನ ಪಾತ್ರ ವಹಿಸಲು ಸಮರ್ಥವಾದ ಏಕೈಕ ಶಕ್ತಿಯಾದ ಅಖಿಲ ಭಾರತ ಕೇಂದ್ರವನ್ನು ದುರ್ಬಲಗೊಳಿಸಲು ಅವಕಾಶ ನೀಡಬಾರದು. ಈ ದೃಷ್ಟಿಕೋನದಿಂದಲೇ ಮುಂಬರುವ ಪ್ರತಿಪಕ್ಷಗಳ ನಡುವಿನ ಮಾತುಕತೆಗಳಲ್ಲಿ ಹಾಗೂ ಸರ್ಕಾರಿಯಾ ಆಯೋಗದ ಕಲಾಪಗಳಲ್ಲಿ ನಾವುನಮ್ಮ ಪಾತ್ರವಹಿಸುತ್ತೇವೆ.ಕೇಂದ್ರದವಿರುದ್ಧ ನಮ್ಮ ಟೀಕೆಯೇನೆಂದರೆ, ದೇಶವನ್ನು ಆಕ್ರಮಣದಿಂದ ರಕ್ಷಿಸುವಲ್ಲಿ, ರಾಷ್ಟ್ರೀಯ ಆರ್ಥಿಕತೆಯನ್ನು ಬೆಳೆಸುವಲ್ಲಿ, ಶಾಂತಿ, ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಹಾಗೂ ಸಮಾಜವಾದಕ್ಕಾಗಿ ಜಾಗತಿಕ ಹೋರಾಟದಲ್ಲಿ ಭಾರತೀಯ ಜನತೆಯನ್ನು ಅವಿಭಾಜ್ಯ ಅಂಗವಾಗಿಸುವಲ್ಲಿ ನೆರವಾಗುವ ಏಕೈಕ ಶಕ್ತಿಯಾದ ಜನತೆಯ ಐಕ್ಯತೆಯನ್ನು, ರಾಜ್ಯಗಳಿಗೆ ಸ್ವಯಮಾಧಿಕಾರವನ್ನು ನಿರಾಕರಿಸುವ ಕೇಂದ್ರದ ಧೋರಣೆ ದುರ್ಬಲಗೊಳಿಸುತ್ತದೆ.

ರಾಷ್ಟ್ರೀಯ ಹಾಗೂ ಅಂತರ ರಾಷ್ಟ್ರೀಯ ಪ್ರಶ್ನೆಗಳ ಕುರಿತಾದ ಈ ಸಮಾನ ನಿಲುವು ನಮ್ಮ ಪಕ್ಷವನ್ನು ಸಿ.ಪಿ.ಐ. ಹಾಗೂ ಇತರ ಪಕ್ಷಗಳನ್ನು ಒಂದುಗೂಡಿಸಿ ಎಡ ಹಾಗೂ ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯತೆಗಾಗಿ ದುಡಿಯಲು ಅನುವು ಮಾಡಿಕೊಟ್ಟಿದೆ. ಅಲ್ಲದೆ, ಆಳುವ ಕಾಂಗ್ರೆಸ್(ಐ) ನ ಸರ್ವಾಧಿಕಾರದೆಡೆ ಚಲನೆಯ ವಿರುದ್ಧ ಪ್ರಜಾಪ್ರಭುತ್ವಕ್ಕಾಗಿ ಹೋರಾಟ ನಡೆಸುವ ಬಗ್ಗೆ ನಾವು ಹಲವಾರು ರಾಜಕೀಯ ಪಕ್ಷಗಳೊಂದಿಗೆ ಹಾಗೂ ಸಂಘಟನೆಗಳೊಂದಿಗೆ ಸಮಾನ ಅಭಿಪ್ರಾಯ ಹೊಂದಿದ್ದು, ಅದರಿಂದ ಪ್ರಜಾಪ್ರಭುತ್ವಕ್ಕಾಗಿ ಹೋರಾಡಲು ವ್ಯಾಪಕ ವೇದಿಕೆಯೊಂದನ್ನು ಬೆಳೆಸಲು ಸಾಧ್ಯವಾಗಿದೆ."

ಪ್ರಕಟಣೆ

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ದ ಸೋಮವಾರ ಪೇಟೆ ತಾಲ್ಲೂಕು ಸಮಿತಿಯ ಹೆಸರಿನಲ್ಲಿ ಕೆಲವರು ವ್ಯವಹರಿಸುತ್ತಿರುವುದಾಗಿ ಪಕ್ಷದ ಕರ್ನಾಟಕ ರಾಜ್ಯ ಸಮಿತಿಯ ಗಮನಕ್ಕೆ ಬಂದಿರುತ್ತದೆ. ಈ ಮೂಲಕ ಪಕ್ಷದ ಸದಸ್ಯರಿಗೆ, ಹಿತೈಷಿಗಳಿಗೆ ಮತ್ತು ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ನಮ್ಮ ಪಕ್ಷದ ಸೋಮವಾರ ಪೇಟೆಯ ತಾಲ್ಲೂಕು ಸಮಿತಿಯೂ ಇರುವುದಿಲ್ಲ ಮತ್ತು ಸೋಮವಾರ ಪೇಟೆಯಲ್ಲಿ ಪಕ್ಷದ ಸದಸ್ಯರಿರುವುದಿಲ್ಲ.

★ ★ ★

ಹರಿಹರದಲ್ಲಿರುವ ಎಂ. ಇಕ್ಬಾಲ್ ಹುಸೇನರನ್ನು ಪಕ್ಷ ವಿರೋಧಿ ಚಟುವಟಿಕೆಗಳಿಗಾಗಿ ಪಕ್ಷದಿಂದ ಉಚ್ಚಾಟನೆ ಮಾಡಿರುವುದನ್ನು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ದ. ಕರ್ನಾಟಕ ರಾಜ್ಯ ಸಮಿತಿಯು ತಾ. 19-8-1983 ರಂದು ದೃಢೀಕರಿಸಿದೆ.

ಪಿ. ರಾಮಚಂದ್ರರಾವ್
ಕಾರ್ಯದರ್ಶಿ

ಸ್ವಾತಂತ್ರ್ಯ ಚಳವಳಿಯಲ್ಲಿ ವಿದ್ಯಾರ್ಥಿಗಳ

(ಆಗಸ್ಟ್ 14ರ ಸಂಚಿಕೆಯಿಂದ)

ಬ್ರಿಟಿಷ್ ಜಿಲ್ಲಾ ನ್ಯಾಯಾಧೀಶ ಇದ್ದಕ್ಕಿದ್ದಂತೆ ಆಶ್ಚರ್ಯ ಚಕಿತನಾಗಿ "ಅವರೇ ಹುಚ್ಚರಾಗಿದ್ದಾರೆಯೇ. ಅವರ ಮೇಲೆ ಈ ಗುಂಡುಗಳೇನೂ ಪರಿಣಾಮ ಬೀರುವುದಿಲ್ಲವೇ" ಎಂದು ಕೇಳಿದನು. ನಮ್ಮ ವಿದ್ಯಾರ್ಥಿಗಳು ವಹಿಸಿದ ಪಾತ್ರದ ಬಗ್ಗೆ ಒಂದು ಉದಾಹರಣೆಯನ್ನು ಮಾತ್ರ ನಿಮ್ಮ ಮುಂದಿಟ್ಟಿದ್ದೇನೆ. ಅಂತಹ ಸನ್ನಿವೇಶಗಳಲ್ಲಿ ಇಂದು ದೇಶಕ್ಕೆ ಸ್ವಾತಂತ್ರ್ಯವನ್ನು ಗಳಿಸಿಕೊಟ್ಟವರು ತಾವೆಂದು ಹೆಮ್ಮೆಯಿಂದ ಹೇಳಿಕೊಳ್ಳುವ ಮುಖಂಡರ ನಿಜವಾದ ಬಣ್ಣವನ್ನು ನಾನು ಕಂಡಿದ್ದೇನೆ. ಮೂರು ದಿನಗಳ ನಂತರ ಭೂಗತ ಜೀವನವನ್ನು ನಡೆಸುವುದು ಅಸಹನೀಯವೆಂದು ತಾವಾಗಿಯೇ ನ್ಯಾಯಾಧೀಶನಿಗೆ ಫೋನ್‌ಮಾಡಿ ತಾವು ಇಂತಹ ನಿರ್ದಿಷ್ಟ ಸ್ಥಳದಲ್ಲಿ ಇರುತ್ತೇವೆಂದು, ತಮ್ಮನ್ನು ಬಂದು ಬಂಧಿಸಬೇಕೆಂದು ಕೇಳಿಕೊಂಡು ಬಂದವರು ನನ್ನ ಜೊತೆ ನೈನಿ ಜೈಲಿನಲ್ಲಿದ್ದರು. ಇದು ಈ ನಾಯಕರುಗಳು ನಿರ್ವಹಿಸಿದ ಪಾತ್ರ. ಒಂದೆಡೆ ವಿದ್ಯಾರ್ಥಿಗಳ ಧೈರ್ಯಗಾರಿಕೆ, ಇನ್ನೊಂದೆಡೆ ನಾಲ್ಕು ದಿನಗಳೂ ಸಹ ಭೂಗತ ಜೀವನ ನಡೆಸಲು ಸಾಧ್ಯವಿಲ್ಲದ ಇಂತಹ ನಾಯಕರುಗಳ ಮನೋಭಾವ ಇದಾಗಿತ್ತು. ಮೆರವಣಿಗೆಯೊಂದರ ನೇತೃತ್ವ ವಹಿಸಿ ಎಡ ತೋಳಿನಲ್ಲಿ ಗುಂಡೇಟಿನಿಂದ ಗಾಯಗೊಂಡ ಹತ್ತು ವರ್ಷ ವಯಸ್ಸಿನ ಪಾರಸ್ನಾಥ್ ಎಂಬ ಹುಡುಗನೂ ಸಹ ಅಲ್ಲಿದ್ದನು. ಅವನನ್ನು ಜೈಲಿಗೆ ಎಳೆತಂದು ಬ್ಯಾರಕ್‌ನಲ್ಲಿಡಲಾಗಿತ್ತು. ವೈದ್ಯ, ಜೈಲು ಅಧಿಕಾರಿ, ಗೂಢಚಾರ, ಪೋಲಿಸಿನವ ಹೀಗೆ ಒಬ್ಬರಾದ ಮೇಲೊಬ್ಬರು ಆ ಹುಡುಗನ ಬಳಿ ಹೋಗಿ ಕ್ಷಮೆ ಯಾಚಿಸಿದಲ್ಲಿ ಅವನನ್ನು ಬಿಡುಗಡೆ ಮಾಡುವುದಾಗಿಯೂ ಇಲ್ಲವಾದಲ್ಲಿ ತೋಳನ್ನೇ ಕತ್ತರಿಸಿ ಹಾಕಿಬಿಡುವುದಾಗಿ ಬೆದರಿಸಿದರು. ಹತ್ತು ವರ್ಷದ ಬಾಲಕನಾದ ಪಾರಸ್ ತನ್ನ ಎರಡೂ ಕೈಗಳನ್ನೂ ಅವರು ಕತ್ತರಿಸಿದ್ದಾಗ್ಯೂ ಕ್ಷಮೆಯಾಚಿಸದೆ ಕೊನೆಯವರೆಗೂ ಧೃಡವಾಗಿದ್ದನು. ಸ್ವಾತಂತ್ರ್ಯ ಹೋರಾಟದಲ್ಲಿ ಯುವಜನರ ಪಾತ್ರ ಇದು. ಚಿತ್ತಗಾಂಗ್ ಖ್ಯಾತಿಯ ಕಾಮ್ರೇಡ್ ಗಣೇಶ್ ಘೋಷ್‌ರವರಿಂದ ಬಂಗಾಳದಲ್ಲಿ ಅಬ್ದುಲ್ ರಶೀದ್‌ರವರ ಬಿಡುಗಡೆಗೆ ಒತ್ತಾಯಿಸುವ ಸಂದರ್ಭದಲ್ಲಿ ನಡೆದ ಒಂದು ಘಟನೆಯನ್ನು ನಾನು ಕೇಳಿ ತಿಳಿದೆನು. ಪೋಲೀಸರು ಕಟ್ಟಡಗಳಲ್ಲಿ ಅವಿತುಕೊಂಡು ಬೀದಿಗಳ ಕಡೆ ದೃಷ್ಟಿಯಿಟ್ಟು ನೋಡುತ್ತಿದ್ದರು. ಕರ್ಫ್ಯೂ ಜಾರಿಯಲ್ಲಿತ್ತು. ಕೆಲವು ವಿದ್ಯಾರ್ಥಿಗಳು ವಿದ್ಯುತ್ ಕಂಬವೊಂದರ ಮೇಲೆ ರಾಷ್ಟ್ರ ಧ್ವಜವನ್ನು ಹಾರಿಸಲು ನಿರ್ಧರಿಸಿದರು. ಸ್ಪರ್ಧೆ ಪ್ರಾರಂಭವಾಯಿತು. ವಿದ್ಯಾರ್ಥಿಗಳಲ್ಲೊಬ್ಬನು ಬಾವುಟವನ್ನಿಡಿದು ಕಂಬವನ್ನೇರಲಾರಂಭಿಸಿದನು. ಕಟ್ಟಡಗಳ ಸಂದಿಯಿಂದ ಒಂದು ಗುಂಡು ಹಾರಿಸಲಾಗಿ ಅವನು ಕುಸಿದು ಬಿದ್ದ. ಎರಡನೆಯ ವಿದ್ಯಾರ್ಥಿಯೊಬ್ಬನು ತನ್ನ ಕೈಯಲ್ಲಿ ಬಾವುಟ ಹಿಡಿದು ಕಂಬವನ್ನೇರಲು ಪ್ರಾರಂಭಿಸಿದನು. ಅವನಿಗೂ ಗುಂಡಿಕ್ಕಲಾಯಿತು. ಮೂರನೆಯ ವಿದ್ಯಾರ್ಥಿಯೊಬ್ಬನು ಬಾವುಟವನ್ನೆತ್ತಿಕೊಂಡು ತನ್ನೆಡೆಗೆ ಗುಂಡಿನ ಮಳೆ ಸುರಿಸುತ್ತಿದ್ದರೂ ಕಂಬವನ್ನೇರಿ ಧ್ವಜವನ್ನು ಹಾರಿಸಿದನು. ಅವನು ಇಳಿಯುತ್ತಿದ್ದಾಗ ಗುಂಡಿನ ಏಟು ತಗುಲಿತು. ನಮಗೆ ಸ್ವಾತಂತ್ರ್ಯವನ್ನು ತಂದುಕೊಟ್ಟ ವಿದ್ಯಾರ್ಥಿ ಯುವಜನರ ಸ್ಫೂರ್ತಿ ಹಾಗಿತ್ತು.

ಸ್ವಾತಂತ್ರ್ಯ ಹೋರಾಟದಲ್ಲಿ ಜನತೆಯು ಅದರಲ್ಲೂ ವಿದ್ಯಾರ್ಥಿ-ಯುವ ಜನತೆಯು ವಹಿಸಿದ ಪಾತ್ರವನ್ನು ಸ್ವಾತಂತ್ರ್ಯ ಚಳುವಳಿಯ ಚರಿತ್ರೆಯ ಪುಟಗಳಿಂದ ತೆಗೆದು ಹಾಕಿ ಮುಂಬರುವ ಜನಾಂಗ ಇದರಿಂದ ಸ್ಫೂರ್ತಿ ಪಡೆಯದಂತೆ ಮಾಡಿರುವುದು ನಮ್ಮ ದೇಶದ ದುರಾದೃಷ್ಟ. ಇದೂ ಸಹ ಆಳುವ ವರ್ಗದ ಧೋರಣೆಯಾಗಿದೆ. ಆಳುವವರ್ಗದ ದೃಷ್ಟಿಯಲ್ಲಿ ಚರಿತ್ರೆಯ ನಿರ್ಮಾಣದ ಪ್ರಕ್ರಿಯೆಯಲ್ಲಿ ಜನತೆಗೆ ಯಾವುದೇ ಪಾತ್ರ ಕಾಣುವುದಿಲ್ಲ.

ನೀವು ರಾಮಾಯಣವನ್ನು ಓದಿರಬೇಕಲ್ಲವೇ. ಅದರಲ್ಲಿ ಬ್ರಾಹ್ಮಣನ ಮಗನೊಬ್ಬನು ಸತ್ತ ಕಾರಣಕ್ಕಾಗಿ ಪ್ರಭು ರಾಮಚಂದ್ರನು ಶೂದ್ರನಾದ ಶಂಬುಕನು ಪ್ರಾರ್ಥನೆ ಮಾಡುತ್ತಿದ್ದಾಗ ಹಿಂಬದಿಯಿಂದ ಅವನ ತಲೆಯನ್ನು ಕತ್ತರಿಸಿ ಹಾಕಿದ ಒಂದು ಕತೆಯಿದೆ. ಇದೊಂದು ಸಣ್ಣ ಕತೆ. ಆದರೆ ಇದರ ಹಿಂದಿರುವ ಚರಿತ್ರೆಯನ್ನು ಮರೆ ಮಾಚಲಾಗಿದೆ. ಆಗ ಗುಲಾಮ ಪದ್ಧತಿ ಆಚರಣೆಯಲ್ಲಿತ್ತು. ರಾಮನ ಪಟ್ಟಾಭಿಷೇಕದ ಸಂದರ್ಭದಲ್ಲಿ ಪ್ರತಿಯೊಬ್ಬ ಋಷಿ ಮತ್ತು ಪ್ರತಿಯೊಬ್ಬ ಬ್ರಾಹ್ಮಣನಿಗೂ ಒಂದೊಂದು ಸಾವಿರ ದಾಸಿಯರನ್ನು ಕಾಣಿಕೆಯಾಗಿ ನೀಡಲಾಯಿತೆಂದು ವಾಲ್ಮೀಕಿ ರಾಮಾಯಣದಲ್ಲಿ ಹೇಳುತ್ತಾರೆ. ಈ ಸಾವಿರಾರು ಗುಲಾಮರು ಸ್ವತಃ ತಾವಾಗಿಯೇ ಸಂಕೋಲೆಯಲ್ಲಿ ಬಂಧಿಸಿಕೊಳ್ಳಲು ಮುಂದೆ ಬರಲಿಲ್ಲ. ಅವರನ್ನು ಬಲಾತ್ಕಾರವಾಗಿ ಆಕ್ರಮಿಸಿ ತರಲಾಗಿತ್ತು. ಈ ಗುಲಾಮರು ಶಂಬುಕನ ನಾಯಕತ್ವದಲ್ಲಿ ದಂಗೆಯೆದ್ದರು. ಶಂಬುಕನ ಶೌರ್ಯವನ್ನು ವರ್ಣಿಸಿದರೆ ದಲಿತರು ಮತ್ತು ಶೋಷಿತ ಜನಾಂಗ ಭವಿಷ್ಯದಲ್ಲಿ ಇದರಿಂದ ಸ್ಫೂರ್ತಿ ಪಡೆಯಬಹುದು. ಆದ್ದರಿಂದಲೇ ಈ ಕತೆಯನ್ನು ಚರಿತ್ರೆಯಿಂದ ತೆಗೆದು ಹಾಕಿರುವುದು. ಪೂಜಿಸುವ ಹಕ್ಕನ್ನು ಹೊಂದಿರದ ಶೂದ್ರನೊಬ್ಬನು ಪ್ರಾರ್ಥನೆ ಸಲ್ಲಿಸುತ್ತಿದ್ದಕ್ಕಾಗಿ ಅವನ ತಲೆಯನ್ನು ಕಡಿದು ಹಾಕಲಾಯಿತೆಂಬ ಒಂದು ಘಟನೆಯನ್ನು ಮಾತ್ರ ಉಳಿಸಲಾಗಿದೆ. ರಾವಣನ ಪ್ರತಾಪವನ್ನು ಬೇಕಾದರೆ ವಿವರಿಸಬಹುದು, ಏಕೆಂದರೆ ಅವನೂ ರಾಮನಂತೆ ಒಬ್ಬ ರಾಜನಾಗಿದ್ದವನು. ಆದರೆ ಶಂಬುಕನ ಕಾರ್ಯವನ್ನು ಪ್ರಸ್ತಾಪಿಸುವಂತಿಲ್ಲ. ಆದ್ದರಿಂದ ಈ ನೀತಿ ಬಹಳ ದೀರ್ಘಕಾಲದಿಂದ ನಡೆದುಕೊಂಡು ಬಂದಿದ್ದು ನಮ್ಮ ಚರಿತ್ರೆಯನ್ನು ನಾವೇ ಬರೆಯಬೇಕು ಮತ್ತು ಅರ್ಥ ಮಾಡಿಕೊಳ್ಳಬೇಕು. ಈ ಕಾರ್ಯವನ್ನು ನಮ್ಮ ಚರಿತ್ರೆಯನ್ನು ಬರೆಯಲು ಅಸಮರ್ಥರಾದ ಆಳುವ ವರ್ಗಗಳಿಗೆ ಒಪ್ಪಿಸಬಾರದು.

ಆಳುವ ವರ್ಗದ ಚರಿತ್ರೆ ವ್ಯಕ್ತಿಗಳಿಗೆ ಸಂಬಂಧಿಸಿದ್ದೇ ಹೊರತಾಗಿ ಜನತೆಗೆ ಸಂಬಂಧಿಸಿದ್ದಲ್ಲ. ಅಷ್ಟೊಂದು ತ್ಯಾಗ, ಬಲಿದಾನ ಮಾಡಿ ನಮ್ಮ ಸ್ವಾತಂತ್ರ್ಯ ಪಡೆಯಲಾಯಿತು. ಸ್ವಾತಂತ್ರ್ಯಕ್ಕಾಗಿ ಹೋರಾಡಿದವರಿಗೆ ಇದರ ಫಲ ಸಿಗಲಿಲ್ಲವೆಂದು ಒಪ್ಪುವುದಾದರೂ, 'ಈ ಸ್ವಾತಂತ್ರ್ಯ ಸುಳ್ಳು' ಎಂದು ಹೇಳುವವರೊಡನೆ ನಾನು ಸೇರಿಸಿಕೊಳ್ಳುವುದಿಲ್ಲ. ಏಕೆಂದರೆ ಈ ದಿನವೂ ಸಹ ನಾವು ಈ ಪ್ರಶ್ನೆಯನ್ನು ಎದುರಿಸುತ್ತಿದ್ದೇವೆ. ಈ ಸ್ವಾತಂತ್ರ್ಯ ಸುಳ್ಳಾಗಿದ್ದಲ್ಲಿ ಇದನ್ನು ರಕ್ಷಿಸುವ ಮಾತೇಕೆ ? ನಾನಿಲ್ಲಿ ಹೇಳ ಬಯಸುವುದೇನೆಂದರೆ ಅಷ್ಟೊಂದು ತ್ಯಾಗ, ಬಲಿದಾನ ಬಳಿಕ ನಾವು ಗಳಿಸಿದ ಸ್ವಾತಂತ್ರ್ಯವನ್ನು ಆಳುವ ವರ್ಗಗಳಿಂದ ರಕ್ಷಿಸಲಾಗುವುದಿಲ್ಲ. ಸಾಮ್ರಾಜ್ಯಶಾಹಿ ಶಕ್ತಿಗಳು ಮತ್ತೊಮ್ಮೆ ನಮ್ಮನ್ನು ದಾಸ್ಯದಲ್ಲಿ ತಳ್ಳಲು ಪ್ರಯತ್ನಿಸುತ್ತಿವೆ. ಇದು ಮೊದಲನೆಯ ಪ್ರಶ್ನೆ ಮತ್ತು ಇದಕ್ಕಾಗಿ ನಾವು ಸ್ವಾತಂತ್ರ್ಯ ನಂತರದ ಕೆಲವೊಂದು ಘಟನೆಗಳ ಕಡೆ ನಾನೊಮ್ಮೆ ಗಮನ-ಹರಿಸಬೇಕಾಗಿದೆ.

ಸಾಮ್ರಾಜ್ಯಶಾಹಿ ಪಿತೂರಿ:

ದೇಶದ ವಿಭಜನೆಯ ಸಮಯದಲ್ಲಿ ಇಂಗ್ಲೆಂಡಿನ ಪ್ರೊ॥ ಕೂಪ್‌ಲಾಂಡ್ ಎಂಬುವನಿಂದ ಒಂದು ಯೋಜನೆ ಸಿದ್ಧಪಡಿಸಲಾಗಿತ್ತು. ಬ್ರಿಟಿಷರು ಈ ದೇಶವನ್ನು ಬಿಟ್ಟು ಹೋಗುವಾಗ ಇದನ್ನು ಎರಡು ಭಾಗವಾಗಿಯಲ್ಲ ಅನೇಕ ಭಾಗಗಳಾಗಿ ಒಡೆಯುವುದೇ ಈ ಯೋಜನೆಯಾಗಿತ್ತು. ಕಾಶ್ಮೀರವನ್ನು ಒಂದು ಸ್ವತಂತ್ರ ರಾಷ್ಟ್ರವನ್ನಾಗಿ, ಪಂಜಾಬಿನ ಸಿಖ್‌ರಿಗೆ 'ಸಿಖಿಸ್ತಾನ್', ರಾಜಸ್ತಾನದ ರಾಜರುಗಳ ಸಣ್ಣ ಪುಟ್ಟ ರಾಜ್ಯಗಳ ಒಂದು ಒಕ್ಕೂಟ, ಹೈದರಾಬಾದ್ ಒಂದು ಪ್ರತ್ಯೇಕ ರಾಷ್ಟ್ರ, ಹೀಗೆ ಯೋಜನೆಯಿತ್ತು. ಕ್ರಿಶ್ಚಿಯನ್ ಮಿಷನರಿಗಳು ಬಲಿಷ್ಟವಾಗಿದ್ದರಿಂದ 'ರೋಗಗ್ರಸ್ಥ ರಾಜ್ಯ'ಗಳೆಂದು ಕರೆಯಲಾದ ಅಸ್ಸಾಂ, ತ್ರಿಪುರ, ನಾಗಾಲ್ಯಾಂಡ್ ಈ ವಲಯದ ಈಶಾನ್ಯ ರಾಜ್ಯಗಳನ್ನೆಲ್ಲಾ ಮತ್ತೊಂದು ಪ್ರತ್ಯೇಕ ರಾಷ್ಟ್ರವನ್ನಾಗಿ ಮಾಡುವ ಯೋಜನೆಯಿತ್ತು. ದೇಶವು ಆರ್ಥಿಕವಾಗಿ ಹಿಂದುಳಿದಿದ್ದರಿಂದ ಬ್ರಿಟಿಷರಿಗೆ ಅವಲಂಬಿತರಾಗಿದ್ದು ಚೈನಾ ಮತ್ತು ಬರ್ಮಾ ದೇಶಗಳ ವಿರುದ್ಧ ಬಳಸಲು ಕೈಗೊಂಬೆ (ಬಫರ್) ರಾಷ್ಟ್ರವಾಗಿಸುವ ಉದ್ದೇಶವಿತ್ತು. ಆ ಸಂದರ್ಭದಲ್ಲಿ ಬ್ರಿಟಿಷರು ಈ ಯೋಜನೆಯನ್ನು ನಮ್ಮ ಮೇಲೆ ಹೇರುವ ಪರಿಸ್ಥಿತಿಯಲ್ಲಿರಲಿಲ್ಲ. ಆಗ ಪ್ರಧಾನ ಮಂತ್ರಿಯಾಗಿದ್ದ ಅಟ್ಲೀಯನ್ನು ಚರ್ಚಿಲ್ "ಏನು ನೀವು ಬ್ರಿಟಿಷ್ ಸಾಮ್ರಾಜ್ಯವನ್ನು ವಿಸರ್ಜಿಸುತ್ತಿದ್ದೀರಾ ?" ಎಂದು ಕೇಳಿದಕ್ಕೆ ಭಾರತವನ್ನು ಬಿಡುವುದಕ್ಕಿಂತ ಮೊದಲು ಅಲ್ಲಿ ಬ್ರಿಟಿಷರ ಆರ್ಥಿಕ ಹಿತಾಸಕ್ತಿಗಳನ್ನು ಸಂರಕ್ಷಿತವಾಗಿರಿಸಲು ಪ್ರಯತ್ನಿಸುತ್ತಿರುವುದಾಗಿ ಅಟ್ಲಿ ಉತ್ತರಿಸಿದನು. ನಾವು ಇದುವರೆಗೆ ಯಾವ ಶಕ್ತಿಯ ಬೆಂಬಲದಿಂದ ಭಾರತವನ್ನು ಆಳಿದೆವೋ ಆ ಸೈನ್ಯವೂ ಈಗ ನಮ್ಮನ್ನು ಕೈಬಿಟ್ಟಿರುವುದು ಇದಕ್ಕೆ ಕಾರಣವೆಂದು ಅವನು ಹೇಳಿದನು. ಸೈನ್ಯವು ನಮ್ಮನ್ನು ಕೈಬಿಟ್ಟಿದೆ, ಜನರು ಇನ್ನು ಎಷ್ಟು ಮಾತ್ರಕ್ಕೂ ನಮ್ಮ ಆಡಳಿತವನ್ನು ಸಹಿಸಿಕೊಳ್ಳಲು ಸಿದ್ಧರಿಲ್ಲ, ಇಂತಹ ಪರಿಸ್ಥಿತಿಯಲ್ಲಿ ನಾವು ನಮ್ಮ ಹಿತಾಸಕ್ತಿಗಳನ್ನು ಸುರಕ್ಷಿತವಾಗಿರಿಸಿ ಹಿಂತಿರುಗಿಸಿಬಿಡುತ್ತೇವೆ. ಕೆಲವು ದಿನಗಳ ನಂತರ ಪಾರ್ಲಿಮೆಂಟಿನಲ್ಲಿ ಚರ್ಚೆಯೊಂದರಲ್ಲಿ ಚರ್ಚಿಲ್ ಪುನಃ ಅಟ್ಲಿಯನ್ನು ವಿರೋಧಿಸಿದನು. ಭಾರತ ಮತ್ತು ಇದರೊಂದಿಗೆ ಆಗ್ನೇಯ ಏಷ್ಯಾದ ಒಂದು ಭಾಗ ಮತ್ತು ಆಫ್ರಿಕವು ಕಮ್ಯುನಿಸಂ ಕಡೆಗೆ ವಾಲುವುದನ್ನು ತಪ್ಪಿಸಲು ಕಮ್ಯುನಿಸಂನ್ನು ಎದುರಿಸಬಲ್ಲವರಿಗೆ ಅಧಿಕಾರ ಹಸ್ತಾಂತರ ಮಾಡಿ ಭಾರತದಿಂದ ಕಾಲ್ತೆಗೆಯುವುದು ಆಗತ್ಯವಾಗಿದೆ ಎಂದು ಅಟ್ಲಿ ಉತ್ತರಿಸಿದನು. ಭಾರತವನ್ನು ಇಬ್ಭಾಗ ಮಾಡುವುದಕ್ಕಿಂತ ಹೆಚ್ಚೇನನ್ನೂ ಮಾಡಲು ಬ್ರಿಟಿಷರಿಗೆ ಅಂದು ಸಾಧ್ಯವಿರಲಿಲ್ಲ.

ದೇಶ ವಿಭಜನೆಯ ಸಂದರ್ಭದಲ್ಲಿ ಪಾಕಿಸ್ತಾನವು ಆರ್ಥಿಕವಾಗಿ ದುರ್ಬಲವಾಗಿತ್ತು. ಅಮೆರಿಕಾದ ಅಧ್ಯಕ್ಷ ಬ್ರಿಟಿಷ್ ಸರ್ಕಾರಕ್ಕೆ 'ನೀವು ವಿಭಜನೆ ಕಾರ್ಯವನ್ನು ನೋಡಿಕೊಳ್ಳಿ ನಾವು ಪಾಕಿಸ್ತಾನವನ್ನು ಆರ್ಥಿಕವಾಗಿ ಬಲಿಷ್ಟಗೊಳಿಸುವ ಕಾರ್ಯ ನೋಡಿಕೊಳ್ಳುತ್ತೇವೆ' ಎಂದು ಬರೆದರು. ಆನಂತರದ ಘಟನೆಗಳು ನಿಜಾಂಶವನ್ನು ಬಯಲಿಗೆಳೆದಿವೆ. 1974ರಲ್ಲಿ ಅಮೆರಿಕಾದ ಸಂಶೋಧಕರ ತಂಡವೊಂದು ಇಲ್ಲಿಗೆ ಬಂದು ನಾಲ್ಕು ವರ್ಷಗಳ ಕಾಲ ಉಳಿದಿತ್ತು. ಸಂಶೋಧನೆಯ ವಿಷಯ 'ಕೋಮುವಾದ, ಜಾತೀವಾದ ಮತ್ತು ಪ್ರಾದೇಶಿಕ ವಾದಗಳಿಂದ ಉದ್ಭವಿಸುವ ಸಮಸ್ಯೆಗಳು' ಎಂಬುದಾಗಿತ್ತು. ಭಾರತ ದೇಶವು ಒಂದೇ ಕೇಂದ್ರದಿಂದ ಆಡಳಿತ ನಡೆಸಲು ಬಹಳ ದೊಡ್ಡ ದೇಶವೆಂದೂ, ಆದ್ದರಿಂದ ಸಮರ್ಥ ಆಡಳಿತಕ್ಕೆ ದೇಶವನ್ನು ಒಡೆಯುವುದು ಅಗತ್ಯವೆಂದು ಈ ಸಂಶೋಧನಾ ತಂಡ ಸಿ. ಐ. ಎ. ಗೆ ಸಲ್ಲಿಸಿದ ವರದಿಯಲ್ಲಿ ತಿಳಿಸಲಾಯಿತು. ಈ ಯೋಜನೆಯನ್ನು ಕಾರ್ಯಗತಗೊಳಿಸಲು ಕೋಮುವಾದಿ, ಜಾತೀವಾದಿ ಮತ್ತು ಪ್ರಾದೇಶಿಕವಾದಿ ಶಕ್ತಿಗಳನ್ನು ಬಳಸಿಕೊಳ್ಳಬಹುದೆಂಬುದು ಈ ಸಂಶೋಧಕರು 74–78ರ ವರೆಗಿನ ಸಂಶೋಧನೆಯಿಂದ ಸಿದ್ಧಪಡಿಸಿದ ವರದಿಯ ಮುಖ್ಯ ಸಾರಾಂಶವಾಗಿತ್ತು. ಇದಾದ ನಂತರ ಗಂಗಾ ಮತ್ತು ಬ್ರಹ್ಮಪುತ್ರಾ ನದಿಗಳನ್ನು ಒಂದು ಗೂಡಿಸುವ ಭಾರತ ಮತ್ತು ಬಾಂಗ್ಲಾದೇಶಗಳಿಂದ 'ಅಂಗೀಕೃತ'ವಾದ ಅಮೆರಿಕಾದ 'ಅಪರೇಷನ್ ಬ್ರಹ್ಮಪುತ್ರಾ' ಬಂದಿತು. ಅಮೆರಿಕಾದ ಇಂಜಿನಿಯರ್‌ಗಳು, ತಂತ್ರಜ್ಞರು ಕಳೆದ ಐದು ವರ್ಷಗಳಿಂದಲೂ ಈ ಯೋಜನೆಯ ಜಾರಿಗೆ ಕೆಲಸ ಮಾಡುತ್ತಿದ್ದು ಇನ್ನೂ ಈ ಕಾರ್ಯ ಮುಗಿದಿಲ್ಲ. ಸಿ. ಐ. ಎ. ಈ ತಂತ್ರಜ್ಞರಿಗೆ ಅನೇಕ ನಿರ್ದೇಶನಗಳನ್ನು ಕಳುಹಿಸಿದ್ದು ಬಂಗಾಳದಲ್ಲಿ ಈ ಸುದ್ದಿ ಸಿಕ್ಕಿ ಸಿ. ಪಿ. ಐ. (ಎಂ) ಪಕ್ಷದ 'ಪೀಪಲ್ಸ್ ಡೆಮಾಕ್ರಸಿ' ಪತ್ರಿಕೆಯಲ್ಲಿ ಪ್ರಕಟಿಸಲಾಗಿತ್ತು. ಇದು ಚರಣಸಿಂಗ್ ಪ್ರಧಾನ ಮಂತ್ರಿಯಾಗಿದ್ದ ಕಾಲದಲ್ಲಿ ನಡೆದಿದ್ದು, ಸಿ. ಐ. ಎ. ಯ ಆ ಸುತ್ತೋಲೆಯ ಮೊದಲ ಪ್ಯಾರಾ ಹೀಗಿದೆ. "ನಮ್ಮ ಮಂದಿ ಭಾರತದಲ್ಲಿ ಕೆಲಸ ಮಾಡುತ್ತಿರುವ ರೀತಿಯು ಅವರನ್ನು ಬಹು ಬೇಗ ಬಯಲಿಗೆಳೆದು ಬಿಡುತ್ತದೆ. ಇದು ಬಹಳ ಸಂಕೀರ್ಣ ಪ್ರದೇಶವಾಗಿರುವುದರಿಂದ ನೀವು ಬಹಳ ಎಚ್ಚರಿಕೆಯಿಂದ ಕೆಲಸ ಮಾಡಬೇಕು." ಎರಡನೆಯ ಪ್ಯಾರಾ "ಈ ಪ್ರದೇಶದಲ್ಲಿ ಜನರ ಅತೃಪ್ತಿಗೆ ಮುಖ್ಯ ಕಾರಣಗಳನ್ನು ಗುರುತಿಸಿ ಯಾವ ಘೋಷಣೆಗಳಡಿಯಲ್ಲಿ ಈ ಇಡೀ ಪ್ರದೇಶವನ್ನು ಭಾರತದಿಂದ ಪ್ರತ್ಯೇಕಿಸುವುದು ಸಾಧ್ಯ ಎಂಬುದನ್ನು ನೀವು ಕಂಡು ಹಿಡಿಯಬೇಕು." ಸಿ. ಐ. ಎ. ಯ ಈ ಸುತ್ತೋಲೆಯ ನಿರ್ದೇಶನದ ಪ್ರಕಾರ ಈ ಇಂಜಿನಿಯರ್‌ಗಳು ಮತ್ತು ತಂತ್ರಜ್ಞರು ಈ ಪ್ರದೇಶದಲ್ಲಿ ಕೆಲಸ ಮಾಡುತ್ತಿದ್ದಾರೆ.

ನಮ್ಮ ದೇಶವು ಮಿಲಿಟರಿ ಕೂಟಗಳಿಂದ ಸುತ್ತುವರಿಯಲ್ಪಟ್ಟಿದೆ. ಸಬ್‌ಮೆರಿನ್ ಮತ್ತು ಆಟಮ್ ಬಾಂಬ್‌ಗಳೊಂದಿಗೆ ಅಮೆರಿಕಾದ ಜಾಲ ಹಿಂದೂ ಸಾಗರದಲ್ಲಿದೆ. ಪಾಕಿಸ್ತಾನವನ್ನು ನಮ್ಮ ವಿರುದ್ಧದ ಒಂದು ಮಿಲಿಟರಿ ನೆಲೆಯನ್ನಾಗಿ ಕಟ್ಟಲಾಗಿದೆ. ಒಂದೆಡೆ ದೇಶವನ್ನು ಸುತ್ತುವರಿಯುವ ಮತ್ತೊಂದೆಡೆ ದೇಶವನ್ನು ಛಿದ್ರಗೊಳಿಸುವ ಪಿತೂರಿ ನಡೆದಿದೆ. ಈ ಎಲ್ಲಾ ಅಂಶಗಳನ್ನು ಗಮನಿಸಿದಲ್ಲಿ ನಿಮಗೆ ನಮ್ಮ ಮುಂದಿರುವ ಗಂಡಾಂತರದ ಅರಿವಾಗುತ್ತದೆ.

ಸಾಮ್ರಾಜ್ಯಶಾಹಿ ಪ್ರೇರಿತ ಛಿದ್ರಕಾರಿ ಶಕ್ತಿಗಳು :

ಜನರು ಐಕ್ಯತೆಯಿಂದ ಇದ್ದಲ್ಲಿ ಮತ್ತು ಅವರ ನಡುವೆ ವೈಷಮ್ಯಗಳು ಇಲ್ಲದಿದ್ದಲ್ಲಿ, ದೇಶವನ್ನು ಒಡೆಯುವುದು ಸಾಧ್ಯವಿಲ್ಲವೆಂಬುದು ಸಾಮ್ರಾಜ್ಯಶಾಹಿಗಳಿಗೆ ಚೆನ್ನಾಗಿ ತಿಳಿದಿದೆ. ಆದ್ದರಿಂದಲೇ ಅವರು ಜನರಲ್ಲಿ ಕೋಮುವಾದಿ, ಜಾತೀವಾದಿ ಮತ್ತು ಪ್ರಾದೇಶಿಕವಾದಿ ಭಾವನೆಗಳನ್ನು ಪ್ರಚೋದಿಸಿ ಕೆರಳಿಸುವ ಕಾರ್ಯದಲ್ಲಿ ನಿರತರಾಗಿದ್ದಾರೆ. ಇಂದಿನ ಪರಿಸ್ಥಿತಿಯಲ್ಲಿ. ಯಾವುದೇ ವ್ಯಕ್ತಿಯು ಕೋಮುವಾದಿ ಭಾವನೆಗಳನ್ನು ಬಳಸಿ ಜನ ವಿಭಾಗಗಳನ್ನು ಒಂದರ ವಿರುದ್ಧ ಮತ್ತೊಂದನ್ನು ಎತ್ತಿ ಕಟ್ಟುತ್ತಿದ್ದ ಮತ್ತು ಜಾತೀಯತೆಯನ್ನು ಪ್ರೋತ್ಸಾಹಿಸುತ್ತಿದ್ದಲ್ಲಿ ಅವನು ನಮ್ಮ ದೇಶದ ವೈರಿಗಳ ಕರ್ತವ್ಯವನ್ನು ನೆರವೇರಿಸಿದಂತಾಗುತ್ತದೆ. ನಮ್ಮ ದೇಶವನ್ನು ಮತ್ತು ನಮ್ಮ ಸ್ವಾತಂತ್ರ್ಯವನ್ನು ರಕ್ಷಿಸುವ ಕರ್ತವ್ಯವನ್ನು, ದೇಶದ

ಪಾತ್ರ ಮತ್ತು ಇಂದಿನ ಕರ್ತವ್ಯಗಳು

ಐಕ್ಯತೆಯನ್ನು ರಕ್ಷಿಸುವ, ಕೋಮು ಸೌಹಾರ್ದತೆಯನ್ನು ಕಾಪಾಡುವ ಮತ್ತು ಜಾತೀಯತೆಯ ವಿಷಜ್ವಾಲೆಯಿಂದ ಜನರನ್ನು ಉಳಿಸುವ ಕರ್ತವ್ಯವನ್ನು ಆಳುವ ವರ್ಗಗಳು ನಿರ್ವಹಿಸಲು ಸಾಧ್ಯವಿಲ್ಲ. ಆಳುವ ವರ್ಗ ತನ್ನದೇ ಆದ ದೌರ್ಬಲ್ಯಗಳನ್ನು ಹೊಂದಿದೆ. ಜಗತ್ತಿನಾದ್ಯಂತ ಬಂಡವಾಳಶಾಹಿ ವ್ಯವಸ್ಥೆಯು ಇಂದು ಶಾಶ್ವತ ಬಿಕ್ಕಟ್ಟಿನಲ್ಲಿ ಸಿಲುಕಿರುವುದು ಅದರ ಪ್ರಧಾನ ದೌರ್ಬಲ್ಯವಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಬಂಡವಾಳ ವ್ಯವಸ್ಥೆಯು ಯುದ್ಧಕ್ಕಿಳಿಯುವುದರಿಂದ ಮಾತ್ರ ಬದುಕಿ ಉಳಿಯಲು ಸಾಧ್ಯ. ಜಗತ್ತಿನಾದ್ಯಂತ ಬಂಡವಾಳಶಾಹಿ ವ್ಯವಸ್ಥೆಯು ಕುಸಿಯುತ್ತಿರುವ ಸಮಯದಲ್ಲಿ, ಇಂತಹ ಬಿಕ್ಕಟ್ಟಿನ ಸಂದರ್ಭದಲ್ಲಿ ಭಾರತದಲ್ಲಿ ಅಂತಹ ವ್ಯವಸ್ಥೆಯನ್ನು ಕಟ್ಟಿ ಬೆಳೆಸಲು ಪ್ರಯತ್ನಿಸಲಾಗುತ್ತಿದೆ.

ಆಳುವ ವರ್ಗದ ನೀತಿಗಳ ದಿವಾಳಿತನ

ಬಿಕ್ಕಟ್ಟಿನಲ್ಲಿ ಸಿಕ್ಕಿ ಬಿದ್ದಿರುವ ಆಳುವ ವರ್ಗವು ತನ್ನ ಮುಂದಿರುವ ಕರ್ತವ್ಯವನ್ನು ನಿರ್ವಹಿಸಲು ಸಾಧ್ಯವಿಲ್ಲ. ಕೆಲವು ಸಮಸ್ಯೆಗಳ ಕಡೆ ನಾವೀಗ ಗಮನಹರಿಸೋಣ. ದೇಶದ ರಕ್ಷಣೆಯ ಪ್ರಶ್ನೆ–ಈ ಆಳುವ ವರ್ಗವು ಈಗಾಗಲೇ ತನ್ನ ಸಾಲಗಳಿಂದ ನಮ್ಮನ್ನು ಭಿಕ್ಷುಕರನ್ನಾಗಿ ಮಾಡಿಬಿಟ್ಟಿದೆ. ನಾರ್ವೆ ಸ್ವೀಡನ್, ಸ್ವಿಟ್ಜರ್‌ಲೆಂಡ್ ನಂತಹ ಸಣ್ಣ ಪುಟ್ಟ ದೇಶಗಳಿಗೂ ನಾವು ಸಾಲಗಾರರಾಗಿರುವ ದುಃಸ್ಥಿತಿಯಲ್ಲಿ ಇಂದು ನಾವಿದ್ದೇವೆ. ಮುಂದಿನ ಹತ್ತು ವರ್ಷಗಳ ಬಳಿಕ ನಮ್ಮ ದೇಶವನ್ನು ಮಾರಿದರೂ ಈ ಎಲ್ಲ ಸಾಲ, ಬಡ್ಡಿಯನ್ನು ತೀರಿಸಲು ಸಾಧ್ಯವಾಗುವುದಿಲ್ಲ. ಈಗಾಗಲೇ ನಮ್ಮನ್ನು ಆರ್ಥಿಕವಾಗಿ ತುಳಿದು ಜರ್ಜರಿತರನ್ನಾಗಿ ಮಾಡಿರುವ ಆಳುವ ವರ್ಗದಿಂದ ದೇಶದ ಸ್ವಾತಂತ್ರ್ಯವನ್ನು ರಕ್ಷಿಸಲು ಸಾಧ್ಯವಿಲ್ಲ.

ದೇಶದ ಐಕ್ಯತೆಯನ್ನು ಆಳುವ ವರ್ಗಗಳಿಂದ ರಕ್ಷಿಸಲಾಗುವುದಿಲ್ಲ ಏಕೆಂದರೆ ಈ ಸಮಸ್ಯೆಗಳೆಲ್ಲಾ ಅವರಿಂದಲೇ ಸೃಷ್ಟಿಸಲ್ಪಟ್ಟವುಗಳಾಗಿವೆ. ಚುನಾವಣೆಯ ಸಂದರ್ಭಗಳಲ್ಲಿ ಅವರು ಹಿಂದೂ ಮತದಾರರನ್ನು ಹಿಂದೂಗಳಾಗಿ, ಮುಸ್ಲಿಮರನ್ನು ಮುಸ್ಲಿಮರಾಗಿ, ಅಸ್ಪೃಶ್ಯರನ್ನು ಅಸ್ಪೃಶ್ಯರಾಗಿ ಯಾದವರನ್ನು ಯಾದವರಾಗಿ, ಠಾಕೂರರನ್ನು ಠಾಕೂರರಾಗಿ ಹೀಗೆ ಮುಂತಾಗಿ ಮನವೊಲಿಸಲು ಯತ್ನಿಸುತ್ತಾರೆ. ಚುನಾವಣೆಗಳು ಮುಗಿಯುತ್ತವೆ.

ಆದರೆ ಕೋಮುವಾದ, ಜಾತೀವಾದದ ವಿಷ ಆಳವಾಗಿ ಕೊರೆಯುತ್ತಾ ಹೋಗುತ್ತದೆ. ಪ್ರತಿಯೊಂದು ಚುನಾವಣೆಯ ನಂತರವೂ ಈ ವಿಷಜ್ವಾಲೆ ಪ್ರಜ್ವಲಿಸುತ್ತಾ ಅನೈಕ್ಯತೆಯನ್ನು ಹೆಚ್ಚಿಸುತ್ತಾ ಹೋಗುತ್ತದೆ.

ಸ್ವಾತಂತ್ರ್ಯ ನಂತರದ ಇಷ್ಟೊಂದು ದೀರ್ಘ ಕಾಲದ ಆಡಳಿತೆಯ ನಂತರವೂ ಹರಿಜನರ ಬಸ್ತಿಗಳು ದಹನವಾಗುತ್ತಿರುವುದು, ಹಿಂದೂ-ಮುಸ್ಲಿಂ ಘರ್ಷಣೆಗಳು ಹೆಚ್ಚುತ್ತಿರುವುದು, ಕೋಮು ಸೌಹಾರ್ದತೆ ಬಲಗೊಳ್ಳುವುದರ ಬದಲು ಹಾಳಾಗುತ್ತಿರುವುದು ಆಳುವ ವರ್ಗಕ್ಕೆ ಅವಮಾನಕರ ವಿಷಯವಾಗಿದೆ. ಇದೆಲ್ಲಾ ಆಳುವ ವರ್ಗಗಳ ದಿವಾಳಿಕೋರತೆಯ ಸಾಕ್ಷಿಯಲ್ಲದೆ ಮತ್ತೇನು? ಇದಲ್ಲದೆ ದಕ್ಷ ಆಡಳಿತ, ನಿರುದ್ಯೋಗ, ಭ್ರಷ್ಟಾಚಾರ, ಕಾನೂನು ಮತ್ತು ಶಾಂತಿ ಪಾಲನೆ - ಯಾವುದೇ ಸಮಸ್ಯೆ ನೋಡಿದರೂ ದಿನೇ ದಿನೇ ಮತ್ತಷ್ಟು ಹದಗೆಡದಿರುವ ಯಾವ ಸಮಸ್ಯೆಯೂ ಇಲ್ಲ. ಇದಕ್ಕೆ ಸಂಬಂಧಿಸಿದಂತೆ ಇನ್ನೊಂದು ವಿಷಯವಿದೆ. ನಿಮಗೆ ತಿಳಿದಿರುವಂತೆ ಬಂಡವಾಳಶಾಹಿ ವ್ಯವಸ್ಥೆಯ ಬೆಳವಣಿಗೆಯ ಹಾದಿಯಲ್ಲಿ ಪ್ರಜಾಪ್ರಭುತ್ವ ಒಂದು ಅಡ್ಡಗಲ್ಲಾಗುತ್ತದೆ. ಜನರು ತಮ್ಮ ಪ್ರತಿನಿಧಿಗಳ ನಾಯಕತ್ವವನ್ನು ತಿರಸ್ಕರಿಸಿದಾಗ ಹಣ, ವ್ಯಾಪಾರ ಗೂಂಡಾಗಳು, ಪೋಲೀಸ್ ಇವೆಲ್ಲವೂ ಸಹ ಪರಿಣಾಮವನ್ನು ಕಳೆದುಕೊಳ್ಳುತ್ತವೆ. ತಾನೇ ಸೃಷ್ಟಿಸಿದ ಸಂವಿಧಾನ ಮತ್ತು ಪ್ರಜಾಪ್ರಭುತ್ವ ಸಿದ್ಧಾಂತ ತನ್ನ ಪ್ರಗತಿ ಮತ್ತು ಲಾಭಕ್ಕೆ ಕಾಲ್ತೊಡಕಾಗುವಂತಹ ಪರಿಸ್ಥಿತಿಯಲ್ಲಿ ಬಂಡವಾಳಶಾಹಿ ವರ್ಗವು ತನ್ನದೇ ಸಂವಿಧಾನ, ಪ್ರಜಾಪ್ರಭುತ್ವ ಸಿದ್ಧಾಂತಗಳನ್ನು ಮುರಿದು ಸರ್ವಾಧಿಕಾರಿ ಸ್ವರೂಪವನ್ನು ತಳೆಯುತ್ತದೆ. ಅಂತಹ ಸಮಯದಲ್ಲಿ ಬಂಡವಾಳಶಾಹಿ ಪ್ರಜಾಪ್ರಭುತ್ವವನ್ನೂ ಸಂರಕ್ಷಿಸುವ ಹೊಣೆ ಜನತೆಯ ಮೇಲೆ ಬೀಳುತ್ತದೆ. 'ಜನತಾ ಪ್ರಜಾಪ್ರಭುತ್ವ'ದ ಬಗ್ಗೆ ಮಾತನಾಡುವವರು 'ಬಂಡವಾಳಶಾಹಿ ಪ್ರಜಾಪ್ರಭುತ್ವ'ವನ್ನು ರಕ್ಷಿಸಬೇಕೆನ್ನುವುದು ವಿಚಿತ್ರವಲ್ಲವೆ? ಎಂದು ಕೇಳಬಹುದು. ಈ ದಿನ ಬಂಡವಾಳಶಾಹಿ ಪ್ರಜಾಪ್ರಭುತ್ವವನ್ನು ರಕ್ಷಿಸಿ ಎಂಬ ಘೋಷಣೆ ಒಂದು ಕ್ರಾಂತಿಕಾರಿ ಘೋಷಣೆಯಾಗಿದೆ. ಬಂಡವಾಳಶಾಹಿ ಪ್ರಜಾಪ್ರಭುತ್ವದಲ್ಲಿ ನಾವು - ನೀವು ಪರಸ್ಪರ ಇಲ್ಲಿ ಚರ್ಚಿಸಬಹುದು, ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಬಹುದು, ಸಭೆಗಳನ್ನು ನಡೆಸಬಹುದು. ಪತ್ರಿಕೆಗಳಲ್ಲಿ ನಮ್ಮ ಅಭಿಪ್ರಾಯಗಳನ್ನು ಪ್ರಕಟಿಸಬಹುದು. ಮತ್ತು ನಮ್ಮದೇ ಪತ್ರಿಕೆಗಳನ್ನೂ ಸಹ ಪ್ರಕಟಿಸಬಹುದು ಸರ್ವಾಧಿಕಾರಿ ಆಡಳಿತೆಯಲ್ಲಿ ಇದೂ ಸಹ ಸಾಧ್ಯವಾಗುವುದಿಲ್ಲ. ಇದುವರೆವಿಗೂ ಮತ್ತು ಮುಂದೆಯೂ ಸಹ ಯಾವಾಗಲೂ ಬಂಡವಾಳಶಾಹಿ ವರ್ಗವು ಮಿಲಿಟರಿ ಸರ್ವಾಧಿಕಾರವನ್ನು ಹೇರಬಹುದಾದ ಹಂತದವರೆಗೂ ಪ್ರಜಾಪ್ರಭುತ್ವ ಹಕ್ಕುಗಳನ್ನು ಕ್ರಮೇಣವಾಗಿ ತುಂಡರಿಸುತ್ತಾ ಬರುತ್ತಿದೆ. ನಾವು ಒಮ್ಮೆ ಆಸ್ತಿಯ ಹಕ್ಕನ್ನು ಸಂವಿಧಾನದಿಂದ ತೆಗೆದು ಹಾಕಲು ಸಲಹೆ ಮಾಡಿದ್ದೆವು. ಆಗ ನಮ್ಮನ್ನು ಸಂವಿಧಾನದ ಪಾವಿತ್ರ್ಯತೆಗೆ ಗೌರವ ನೀಡದಿರುವವರೆಂದು ಒಂದು ದೊಡ್ಡ ಹುಯಿಲೆಬ್ಬಿಸಿದಾಗ ಆಸ್ತಿಯ ಹಕ್ಕನ್ನು ರದ್ದು ಮಾಡಲು ಸಿದ್ಧವಿಲ್ಲದಿದ್ದಲ್ಲಿ ರೈತರಿಗೆ, ಕಾರ್ಮಿಕರಿಗೆ ಮತ್ತು ಜನಸಾಮಾನ್ಯರಿಗೆ ಮುಷ್ಕರದ ಹಕ್ಕನ್ನು ಮತ್ತು ಬದುಕಿನ ಹಕ್ಕನ್ನು ನೀಡಬೇಕೆಂದು ಎರಡನೆಯ ಸಲಹೆಯೊಂದನ್ನು ಮುಂದಿಟ್ಟೆವು. ಅವರು ಇದನ್ನೂ ಒಪ್ಪಲಿಲ್ಲ. ಇಂತಹ ಸಲಹೆಯೊಂದನ್ನು ನೀಡಿದ ಕಾರಣಕ್ಕಾಗಿಯೇ ನಮ್ಮನ್ನು ದೇಶಾಭಿಮಾನಿಗಳಲ್ಲವೆಂದು ಹೇಳಲಾಯಿತು. ಆದರೆ ಆಳುವ ವರ್ಗವು ಸಂವಿಧಾನವನ್ನು ಸಂಪೂರ್ಣವಾಗಿ ತಿರುಚಿ ಇದರ ವ್ಯಾಪ್ತಿಯನ್ನು ಸೀಮಿತಗೊಳಿಸಲು ತಿದ್ದುಪಡಿಯ ಮೇಲೆ ತಿದ್ದುಪಡಿಗಳನ್ನು ತಂದಿದೆ. ಸಂವಿಧಾನವು ತಮ್ಮ ಪ್ರಗತಿಗೇ ಅಡ್ಡಿಯಾಗಿರುವುದೇನೋ ಎಂಬಂತೆ ಅವರು ಇದರಿಂದಲೂ ತೃಪ್ತಿಗೊಂಡಿಲ್ಲ.

ಯುದ್ಧವು ಬಂಡವಾಳಶಾಹಿಯ ಜೀವ, ಶಾಂತಿ ಅದರ ಸಾವು:

ಇವು ಇಂದಿನ ವಿಶಾಲ ವ್ಯಾಪ್ತಿಯ ವಿಷಯಗಳಲ್ಲಿ ಕೆಲವು. ಇದೆಲ್ಲದರೊಂದಿಗೆ ಇನ್ನೊಂದು ವಿಷಯವನ್ನು ಸೇರಿಸಿದರೆ ನಿಮಗೆ ಪೂರ್ಣ ಚಿತ್ರ ಸಿಗುತ್ತದೆ. ಏನು ಅದು? ಸಾಮ್ರಾಜ್ಯಶಾಹಿಗಳು ಇಂದು ಡೆಹರಾಡೂನ್ ನಗರದ ಮೇಲೆ ಪ್ರಯೋಗಿಸಿದರೆ ಕಟ್ಟಡಗಳು, ಕಾರ್ಖಾನೆಗಳಿಗೆ ಸ್ವಲ್ಪವೂ ಹಾನಿಯುಂಟು ಮಾಡದೆ ಮನುಷ್ಯರು ಮತ್ತು ಪ್ರಾಣಿಗಳನ್ನು ಮಾತ್ರ ಕೊಲ್ಲುವಂತಹ ಬಾಂಬುಗಳನ್ನು ಹೊಂದಿದ್ದಾರೆ. ಮಾನವ ಕುಲದ ಘೋರ ಹತ್ಯೆಯ ಮೂಲಕ ಪ್ರಾಬಲ್ಯ ಸ್ಥಾಪನೆಯ ಯತ್ನ! ಶಾಂತಿಗಾಗಿ ಚಳುವಳಿಯನ್ನು ಸಂಘಟಿಸಬಾರದೆಂದು ನಮಗೆ ಹೇಳುವಾಗ ಅವರು ವಾಸ್ತವವಾಗಿ ಇನ್ನೂ ಕೆಲವು ದಿನಗಳ ಜೀವದಾನ ಬೇಡುತ್ತಿದ್ದಾರೆ ಎಂದು ತಿಳಿಯಬೇಕು. ಈ ದಿನ ಯುದ್ಧವು ಸಾಮ್ರಾಜ್ಯಶಾಹಿಗಳಿಗೆ ಜೀವದಾನ ಮತ್ತು ಶಾಂತಿಯು ಮರಣವಾಗಿದೆ. ಜಾಗತಿಕ ಶಾಂತಿ ನೆಲೆಸಿದರೆ ಬಹುಬೇಗ ಸಮಾಜವಾದಿ ಶಿಬಿರವು ಹೊಸದಾಗಿ ಬೆಳವಣಿಗೆ ಆದ ರಾಷ್ಟ್ರಗಳೊಟ್ಟಿಗೆ ಸೇರಿ ತನಗೆ ಸರಿ ಸಾಟಿಯಿಲ್ಲದ ಶಕ್ತಿಯಾಗಿ ಬೆಳೆದು ಬಿಡುವುದೆಂದು ಸಾಮ್ರಾಜ್ಯಶಾಹಿಗಳಿಗೆ ತಿಳಿದಿದೆ. ಅಂತಹ ಪರಿಸ್ಥಿತಿಯುಂಟಾಗುವ ಮೊದಲು ಅವರು ಜಗತ್ತನ್ನು ಒಂದು ಸ್ಮಶಾನವನ್ನಾಗಿಸಲು ಬಯಸುತ್ತಿದ್ದಾರೆ. ಮಾನವ ಕುಲದ ಪ್ರಗತಿಗೆ ಶಾಂತಿ ಚಳುವಳಿಯು ಬಹಳ ಮುಖ್ಯವಾಗಿದೆ. ನಾವು ಶಾಂತಿಯ ಭಿಕ್ಷೆ ಬೇಡುತ್ತಿಲ್ಲ. ಸಾಮ್ರಾಜ್ಯಶಾಹಿಗಳು ಹಿಂದೆ ಅದನ್ನು ನಮಗೆ ಕೊಟ್ಟೂ ಇಲ್ಲ. ಭವಿಷ್ಯದಲ್ಲಿ ಅನುಗ್ರಹಿಸುವುದೂ ಇಲ್ಲ. ಆದರೆ ಶಾಂತಿಗಾಗಿ ಜಾಗತಿಕ ಮಟ್ಟದಲ್ಲಿ ಒಂದು ಬಲಿಷ್ಠ ಚಳುವಳಿಯನ್ನು ಸಂಘಟಿಸಿ ಅಮೇರಿಕಾ ಮತ್ತು ಇಂಗ್ಲೆಂಡ್‌ಗಳಲ್ಲೂ ಬೆಂಬಲ ಪಡೆಯುವ ಈ ಚಳುವಳಿಯ ಮೂಲಕ ಸಾಮ್ರಾಜ್ಯಶಾಹಿ ಶಕ್ತಿಗಳನ್ನ ಈ ರಂಗದಲ್ಲಿ ನಾವು ಸೋಲಿಸೋಣ. ಆದ್ದರಿಂದ ಜಾಗತಿಕ ಶಾಂತಿಯ ರಕ್ಷಣೆ ನಮ್ಮ ಹೋರಾಟದ ಒಂದು ಅಂಗವಾಗಿದೆ.

ನನ್ನ ಯುವ ಸ್ನೇಹಿತರೇ, ನೀವು ನಿಮ್ಮ ಜೀವನದಲ್ಲಿ ಒಂದು ಮಹತ್ಕಾರ್ಯವನ್ನು ಸಾಧಿಸುವ ಗುರಿ ಹೊಂದಿದ್ದೀರೆಂದು ನನಗೆ ತಿಳಿದಿದೆ. ಬೆಳಗಿನ ಅಧಿವೇಶನದಲ್ಲಿ ಪ್ರತಿಧ್ವನಿಸಲಾದ ಘೋಷಣೆಗಳಿಂದ ತಿಳಿದು ಬರುವಂತೆ ಮನುಷ್ಯನಿಂದ ಮನುಷ್ಯನ ಶೋಷಣೆ ಸಾಧ್ಯವಿಲ್ಲದ, ಕೊರತೆ ಎಂಬುದೇ ಇಲ್ಲದಿರುವ, ಬಡತನ ನಿರುದ್ಯೋಗಗಳು ಕೇವಲ ಶಬ್ದಕೋಶದ ಪದಗಳಾಗಿ ಉಳಿಯುವಂತಹ ಒಂದು ಸಾಮ್ರಾಜ್ಯವನ್ನು ಸ್ಥಾಪಿಸುವುದೇ ಆ ಮಹತ್ಕಾರ್ಯವಾಗಿದೆ. ಒಂದು ನ್ಯಾಯಯುತ, ಶೋಷಣೆಯಿಂದ ಮುಕ್ತವಾದ ವರ್ಗರಹಿತವಾದ, ಅಂದರೆ ನಮಗೆಲ್ಲಾ ತಿಳಿದಿರುವಂತೆ ಸಮಾಜವಾದಿ ಸಮಾಜವೊಂದರ ನಿರ್ಮಾಣಕಾರ್ಯ ನಮ್ಮ ದೇಶವೇ ನಮ್ಮ ಕೈಯಲ್ಲಿಲ್ಲದಿದ್ದರೆ ನಾವು ಸಮಾಜವಾದವನ್ನು ಸ್ಥಾಪಿಸುವುದಾದರೂ ಹೇಗೆ? ಆದ್ದರಿಂದ ನಾನು ಇದುವರೆಗೆ ನಿಮ್ಮ ಗಮನಕ್ಕೆ ತಂದಿರುವ ವಿಚಾರಗಳು ಮತ್ತು ಅವುಗಳಿಗೆ ಸಂಬಂಧಿಸಿದ ಹೋರಾಟವನ್ನು ಮುಂದೆ ಕೊಂಡೊಯ್ಯುವುದು ನಮ್ಮ ಮೊದಲ ಕರ್ತವ್ಯವಾಗಿದೆ.

ಇಂದು ನೀವೆಲ್ಲರೂ ವಿದ್ಯಾರ್ಥಿಗಳು ನಾಳೆ ನೀವು ಶಾಲಾ-ಕಾಲೇಜುಗಳಿಂದ ಹೊರಬಂದ ನಂತರ ಅನೇಕ ಸಮಸ್ಯೆಗಳನ್ನು ಎದುರಿಸುತ್ತೀರಿ. ಸಾಮಾನ್ಯವಾಗಿ ನೀವು ವಿದ್ಯಾರ್ಥಿಗಳಾಗಿರುವಾಗ ಪೋಷಕರಿಂದ ದೊರಕುವ ಅಲ್ಪ ಸ್ವಲ್ಪ ಸಹಾಯದಿಂದ ಹೇಗೋ ನಿಭಾಯಿಸುತ್ತೀರಿ, ಆದರೆ ನಿಮ್ಮ ವಿದ್ಯಾಭ್ಯಾಸ ಮುಗಿಸಿದ ತಕ್ಷಣ ನಿಮಗೆ ಒಂದು ದೊಡ್ಡ ಪ್ರಶ್ನೆ ಎದುರಾಗುತ್ತದೆ–ನಾಳೆಯ ಗತಿ ಏನು? ಆದರೆ ಇಂದು ನನ್ನೆದುರು ಕುಳಿತಿರುವವರಿಗೆ ಆ ಸಮಸ್ಯೆಯು ಎದುರಾಗುವುದಿಲ್ಲವೆಂದು ನನಗೆ ವಿಶ್ವಾಸವಿದೆ. ವೈರಿಗಳನ್ನು ಸೋಲಿಸಿ ದೇಶದ ಸಮಸ್ಯೆಗಳನ್ನು ಪರಿಹರಿಸಲು ರಾಷ್ಟ್ರದ ಹಿತಕ್ಕಾಗಿ ಮತ್ತೊಮ್ಮೆ ಮುಂಚೂಣಿಯಲ್ಲಿ ನಿಂತು ಹೋರಾಡುವ ತ್ಯಾಗಮಯ ಯುವಜನರು ಇಂದು ನಮ್ಮ ದೇಶಕ್ಕೆ ಅಗತ್ಯವಿದೆ. ಯುವಜನರು ತಮ್ಮ ವಿದ್ಯಾರ್ಥಿ ಜೀವನದಲ್ಲಿ ಮಾತ್ರವಲ್ಲ ಅನಂತರವೂ ಮುಂದೆ ಬರುತ್ತಾರೆ. ಇದು ಸಾಧ್ಯವಾಗದಿದ್ದಲ್ಲಿ, ನಮ್ಮ ಕರ್ತವ್ಯವು ಪೂರ್ಣವಾಗಿ ನೆರವೇರುವುದಿಲ್ಲ, ನಮ್ಮ ಹುತಾತ್ಮರಾದ ಭಗತ್ ಸಿಂಗ್, ಆಜಾದ್ ಮತ್ತಿತರ ಸಂಗಾತಿಗಳು ಪ್ರಾರಂಭಿಸಿರುವ 'ಯಜ್ಞ'ದ ಸವಾಲು ಇನ್ನೂ ಉಳಿದಿದೆ. ಸ್ವಾತಂತ್ರ್ಯ ಆ ಯಜ್ಞದ ಮೊದಲನೆಯ ಹೆಜ್ಜೆ ಮಾತ್ರ. ಆದ್ದರಿಂದ ದೇಶಕ್ಕಾಗಿ ಮತ್ತು ಮುಂದಿನ ಭವಿಷ್ಯಕ್ಕಾಗಿ ನೀವೆಲ್ಲರೂ ಮುನ್ನುಗ್ಗಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ.

ನಾನು ನಿಮಗೆ ತಿಳಿಸುತ್ತಿರುವ ಜೀವನ ಮಾರ್ಗ ಸುಲಭವಾದುದಲ್ಲ. ಇದು ಏರಿಳಿತಗಳಿರುವ, ಕಷ್ಟಕಾರ್ಪಣ್ಯಗಳಿರುವ ಹಾದಿ. ಆದರೆ ಈ ಏರಿಳಿತಗಳಿಂದ ನಿಮ್ಮ ಕಾಲುಗಳು ದಣಿಯುವುದಿಲ್ಲವೆಂದು ಮತ್ತು ಗುರಿ ಮುಟ್ಟುವ ಮೊದಲು ನೀವು ಕುಸಿದು ಕುಳಿತುಕೊಳ್ಳುವುದಿಲ್ಲವೆಂಬ ಭರವಸೆ ನನಗಿದೆ. ಈ ಹೋರಾಟದ ಪ್ರಕ್ರಿಯೆಯಲ್ಲಿ ಎಲ್ಲ ರೀತಿಯ ಒತ್ತಡಗಳು ಬರಬಹುದು, ಆದರೆ ಸ್ಥಾನ-ಮಾನಗಳ ಒತ್ತಡವು ನಿಮ್ಮನ್ನು ನಿಮ್ಮ ದಾರಿಯಿಂದ ಕದಲಿಸಲಾರವು ಎಂಬ ನಂಬಿಕೆ ನನಗಿದೆ. ತಮ್ಮ ಹಿಂದೆ ಉಳಿದಿರುವ ಸಂಗಾತಿಗಳು ಈ ಕರ್ತವ್ಯವನ್ನು ಮುಂದೆಕೊಂಡೊಯ್ಯುವರೆಂಬ ಭರವಸೆಗಳನ್ನು ಹೊತ್ತು ಪ್ರಾಣಾರ್ಪಣೆ ಮಾಡಿ ಹುತಾತ್ಮರಾಗಿರುವ ವಿದ್ಯಾರ್ಥಿ ಸಂಗಾತಿಗಳ ನೆನಪುಗಳಿಂದ ನಾವಿದನ್ನು ಅನುಸರಿಸೋಣ. ಆ ಭರವಸೆಯಿಲ್ಲದಿದ್ದಲ್ಲಿ ಬಹುಶಃ ಅವರು ಗುಂಡಿನೇಟುಗಳನ್ನು ಸ್ಫೂರ್ತಿಯಿಂದ ಎದುರಿಸಲು ಹೋಗುತ್ತಿರಲಿಲ್ಲ. ಅವರ ಹೃದಯದಲ್ಲಿ ಭರವಸೆಯಿತ್ತು ಮತ್ತು ನಾನೂ ಸಹ ಆ ಭರವಸೆಯಿಂದಲೇ 'ನೀವು ಒಂದು ಅಮರರಾಗ ಬಯಸಿದಲ್ಲಿ ಮುಂದೆ ಬನ್ನಿ, ತ್ಯಾಗಜೀವನದಲ್ಲಿ ಅಮರತೆ ಅಡಗಿದೆ' ಎಂದು ಕರೆ ನೀಡುತ್ತಿದ್ದೇನೆ. ಈ ಜಗತ್ತಿನಲ್ಲಿ ಕೋಟ್ಯಾಂತರ ಜನ ಹುಟ್ಟುತ್ತಾರೆ, ಸಾಯುತ್ತಾರೆ. ಆದರೆ ಒಂದು ಆದರ್ಶಕ್ಕಾಗಿ ಜೀವಿಸಿದಕ್ಕಾಗಿ ಸಾವನ್ನು ಅಪ್ಪುವವರು ಮಾತ್ರ ಅಮರರಾಗಿ ಉಳಿಯುತ್ತಾರೆ. ಆದ್ದರಿಂದ ನೀವೂ ಅಮರರಾಗಬಯಸಿದಲ್ಲಿ ಒಂದು ಆದರ್ಶಕ್ಕಾಗಿ ಸಾಧನೆಗಾಗಿ ನಿಮ್ಮ ಪ್ರಾಣವನ್ನು ಅರ್ಪಿಸಲು ಹಿಂಜರಿಯಬೇಡಿ.

ಈ ಮಾತುಗಳೊಂದಿಗೆ ನಾನು ನಿಮಗೆ ಇನ್ನೊಂದು ಕೊನೆಯ ವಿಷಯವನ್ನು ಹೇಳುತ್ತೇನೆ. ಆಗಾಗ್ಗೆ ಜನರು ನಾನು ನನ್ನ ಸ್ನೇಹಿತರಿಗೆ ಮತ್ತು ಯುವ ಜನರಿಗೆ ಪ್ರೀತಿಯ ಬದಲು ಸೇಡಿನ ಪಾಠವನ್ನು ಕಲಿಸುವೆನೆಂದು ಹೇಳುತ್ತಿರುತ್ತಾರೆ. ಈ ತಪ್ಪನ್ನು ಮಾಡುತ್ತಿರುವೆನೆಂಬ ಪ್ರಜ್ಞೆ ನನ್ನಲ್ಲಿದೆ. ಒಬ್ಬ ಇರಾನಿ ಕವಿ ಹೇಳಿದ್ದಾನೆ 'ಯಾರು ದ್ವೇಷಿಸುವುದು ಹೇಗೆಂದು ತಿಳಿದಿರುವುದಿಲ್ಲವೋ ಅವರು ಪ್ರೀತಿಸುವುದು ಹೇಗೆಂದೂ ತಿಳಿದಿರಲಾರರು, ನೀವು ನಿಮ್ಮ ದೇಶ ಮತ್ತು ಜನತೆಯ ಶತ್ರುಗಳ ವಿರುದ್ಧ ದ್ವೇಷವನ್ನು ರೂಢಿಸಿಕೊಳ್ಳಬೇಕು. ನೀವು ಯುದ್ಧದ ಅನ್ಯಾಯವನ್ನು, ದಬ್ಬಾಳಿಕೆಯನ್ನು, ಹಸಿವು, ನಿರುದ್ಯೋಗ ಮತ್ತು ಇವುಗಳನ್ನು ಸೃಷ್ಟಿಸುವ ಶಕ್ತಿಗಳನ್ನು ದ್ವೇಷಿಸಲಾರರಾದಲ್ಲಿ ದೇಶದ ಜನತೆಗಾಗಿ ನೀವು ನಿಮ್ಮನ್ನು ಹೆಮ್ಮೆಯಿಂದ ಅರ್ಪಿಸಿಕೊಳ್ಳಲಾರಿರಿ. ಆದ್ದರಿಂದ ನಮ್ಮ ದೇಶ ಮತ್ತು ಸಮಾಜವನ್ನು ಹಿಂದೆ ಕೊಂಡೊಯ್ಯುವ ಶಕ್ತಿಗಳನ್ನು ಸುಟ್ಟು ಭಸ್ಮ ಮಾಡಬಲ್ಲಂತಹ ಸೇಡಿನ ಜ್ವಾಲೆಯನ್ನು ಅಂತಹ ಶಕ್ತಿಗಳ ವಿರುದ್ಧ ಹೊತ್ತಿಸಿ ಆ ಜ್ವಾಲೆಯಿಂದ ನೀವು ಪ್ರಜ್ವಲಿತರಾಗಿ ಹೊರಬರಬೇಕು. ಆಗ ನಿಮ್ಮ ಜೀವನವು ಸಾರ್ಥಕವಾಗುತ್ತದೆ ಮತ್ತು ನಾನೂ ನನ್ನ ಪೀಳಿಗೆಯು ಈ ಹೋರಾಟವನ್ನು ಮುಂದೆ ನಡೆಸಿದಂತಹ ಪೀಳಿಗೆಯೆಂದು ಹೇಳಿಕೊಳ್ಳಬಹುದು.

(ಮುಗಿಯಿತು)

ಕಬ್ಬು ಬೆಳೆಗಾರರ ಸಮಸ್ಯೆ-ಬಂಡವಾಳಶಾಹಿ ಪಥದ ಪರಿಣಾಮ

-ಎನ್. ಕೆ. ಉಪಾಧ್ಯಾಯ

ಕಬ್ಬು ಬೆಳೆಯುವ ರೈತರ ಒಂದು ಗುಂಪು ರುದ್ರಪ್ಪನವರ ಅಧ್ಯಕ್ಷತೆಯಲ್ಲಿ, ಇರುವ ರೈತ ಸಂಘದ ನೇತೃತ್ವದಲ್ಲಿ ವಿಧಾನಸೌಧದ ಒಳಗೆ ನಾಲ್ಕೈದು ದಿವಸ ಸತ್ಯಾಗ್ರಹ ನಡೆಸಿದರು. ಬೆಳೆದ ಕಬ್ಬಿಗೆ ಹೆಚ್ಚು ಬೆಲೆ ಸಿಗಬೇಕು, ಸಕ್ಕರೆ ಕಾರ್ಖಾನೆಗಳಿಂದ ರೈತರಿಗೆ ಸಲ್ಲತಕ್ಕ ಹಣ ಕೂಡಲೇ ಪಾವತಿಯಾಗಬೇಕೆಂಬುದೇ ಅವರ ಮುಖ್ಯ ಬೇಡಿಕೆಯಾಗಿತ್ತು.

ಕಬ್ಬನ್ನೊಳಗೊಂಡು ಎಲ್ಲ ಬೆಳೆಗಾರರಿಗೆ ನ್ಯಾಯಬೆಲೆ ಸಿಗಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಮೊದಲಿನಿಂದಲೂ ಪ್ರತಿಪಾದಿಸುತ್ತಾ ಬಂದಿದೆ. ನರಗುಂದ ಬಂಡಾಯದಿಂದ ಕರ್ನಾಟಕಾದ್ಯಂತ ಈ ಸಮಸ್ಯೆ ಹೆಚ್ಚು ಗಮನ ಸೆಳೆದಿದೆ, ಹಲವಾರು ಹೋರಾಟಗಳೇ ನಡೆದು ನೂರಾರು ರೈತರು ಹುತಾತ್ಮರಾಗಿದ್ದಾರೆ. ಆದರೆ ರುದ್ರಪ್ಪನವರ ರೈತ ಸಂಘ ಮೇಲ್ವರ್ಗದ ಕೆಲವೇ ಭೂಮಿದಾರರ ಹಿತದ ದೃಷ್ಟಿಯಿಂದಲೇ ಹೋರಾಡುತ್ತಿದ್ದಾರೆ.

ಸಕ್ಕರೆ ಕಾರ್ಖಾನೆಯ ಮಾಲಿಕರು ಕಬ್ಬು ಬೆಳೆಗಾರರಿಗೆ ಕಳೆದ 2-3 ವರ್ಷಗಳಿಂದ ಕೊಡಬೇಕಾಗಿರುವ 8-10 ಕೋಟಿ ರೂಪಾಯಿಯನ್ನು ಕೂಡಲೇ ಪಾವತಿ ಮಾಡುವಂತೆ ಯೋಗ್ಯ ಕ್ರಮ ತೆಗೆದುಕೊಳ್ಳಬೇಕೆಂದು ಸಿಪಿಐ(ಎಂ) ಶಾಸಕರಾದ ಸೂರ್ಯನಾರಾಯಣರಾವ್ ಅವರು ವಿಧಾನ ಸಭೆಯಲ್ಲಿ ಒತ್ತಾಯಪಡಿಸಿದರು. ಸೆಪ್ಟೆಂಬರ್ ಕೊನೆಯೊಳಗಾಗಿ ಬಾಕಿ ಹಣ ಪಾವತಿ ಮಾಡುವ ವ್ಯವಸ್ಥೆ ಕೈಗೊಳ್ಳುವುದಾಗಿ ಮಂತ್ರಿ ಬೊಮ್ಮಾಯಿಯವರು ವಿಧಾನಸಭೆಯಲ್ಲಿ ಹೇಳಿದರು.

ಕೇಂದ್ರದ ಕಾನೂನು

ಕಬ್ಬಿನ ಬೆಲೆ ನಿರ್ಧರಿಸುವ, ಸಕ್ಕರೆ ಕಾರ್ಖಾನೆಗಳಿಗೆ ಪರ್ಮಿಟ್ ಕೊಡುವವರು, ಸಕ್ಕರೆಯ ಲೆವಿ ಬೆಲೆ ನಿರ್ಧರಿಸುವವರು ಕೇಂದ್ರ ಸರಕಾರ. 1966ರ ಸಕ್ಕರೆ ನಿಯಂತ್ರಣ ಆಜ್ಞೆ ಪ್ರಕಾರ ಕಬ್ಬು ಕೊಂಡುಕೊಳ್ಳುವ ಕಬ್ಬಿನ ಬೆಲೆಯನ್ನು ಕೇಂದ್ರ ಸರಕಾರ ಕಾಲಕಾಲಕ್ಕೆ ಸರಕಾರಿ ಪ್ರಕಟನೆಯ ಮೂಲಕ ನಿರ್ಧರಿಸುವುದು ಎಂದು ಹೇಳಲಾಗಿದೆ. ಈ ರೀತಿ ಬೆಲೆ ನಿರ್ಧರಿಸುವಾಗ, ಉತ್ಪಾದನೆಯ ಖರ್ಚು, ನ್ಯಾಯಬೆಲೆಯಲ್ಲಿ ಗ್ರಾಹಕರಿಗೆ ಸಕ್ಕರೆಯ ಲಭ್ಯತೆ, ಬೇರೆ ಬೆಳೆಗಳಿಂದಾಗಿ ರೈತನಿಗೆ ಸಿಗಬಹುದಾದ ಲಾಭ, ಕಾರ್ಖಾನೆಗಳು ಸಕ್ಕರೆ ಮಾರಾಟ ಮಾಡುವ ಬೆಲೆ ಮತ್ತು ಕಬ್ಬಿನಿಂದ ಅವರಿಗೆ ಸಿಗುವ ರಸದ ಅಂಶಗಳನ್ನೆಲ್ಲ ಪರಿಗಣಿಸಬೇಕೆಂದು ಸರಕಾರಿ ಆಜ್ಞೆಯಲ್ಲಿದೆ.

ಆದರೆ ಕೇಂದ್ರ ಸರಕಾರ ಕಬ್ಬಿನ ಬೆಲೆ ನಿರ್ಧರಿಸುವಾಗ ಈ ಅಂಶಗಳನ್ನು ಪರಿಶೀಲಿಸುವಂತೆ ಕಂಡುಬರುವುದಿಲ್ಲ. ಯಾಕೆಂದರೆ ಕಬ್ಬಿನ ಬೆಳೆಗೆ ಹೆಚ್ಚು ಖರ್ಚಾಗುತ್ತಿದೆ; ಗೊಬ್ಬರ ಬೆಲೆ ನೀರಿನ ತೆರಿಗೆಗಳು ಜಾಸ್ತಿಯಾಗಿವೆ. ಆದರೆ ಕಳೆದ ಮೂರು ವರ್ಷಗಳಲ್ಲಿ ಒಕ್ಕಲತನ ಹುಟ್ಟುವಳಿಗೆ ಬೆಲೆ ನಿರ್ಧರಿಸುವ ಕಮಿಟಿ ಕಬ್ಬಿನ ಬೆಲೆಯನ್ನು ಹೆಚ್ಚಿಸಬೇಕೆಂದು ಶಿಫಾರಸು ಮಾಡುತ್ತಿದ್ದರೂ ಕೂಡ ಕೇಂದ್ರ ಸರಕಾರ ಒಂದು ಟನ್ನಿಗೆ ಬರೇ ರೂ 130/- ನಿರ್ಧರಿಸುತ್ತಲೇ ಬಂದಿದೆ. ಕೇಂದ್ರ ಸರಕಾರ ಕಬ್ಬಿನ ಬೆಲೆಯನ್ನು ಅಕ್ಟೋಬರ್-ನವಂಬರ್ ತಿಂಗಳಲ್ಲಿ ನಿರ್ಧರಿಸುತ್ತದೆ. ಆದರೆ ಕರ್ನಾಟಕದಲ್ಲಿ ಕಬ್ಬು ಅರೆಯುವ ಕೆಲಸ ಜೂನ್ ತಿಂಗಳಿಂದಲೇ ಪಾರಂಭವಾಗುತ್ತದೆ. ರೈತ- ಕಬ್ಬು ಬೆಳೆಯುವಾಗ ತನಗೆ ಎಷ್ಟು ಬೆಲೆ ಸಿಗುತ್ತದೆಂದು ಗೊತ್ತಾಗುವುದಿಲ್ಲ. ಹೀಗಾಗಿ ಆತ ಬೇರೆ ಬೆಳೆ ಬೆಳೆಯುವಂತೆಯೂ ಇಲ್ಲ.

ರಾಜ್ಯ ಸರಕಾರದ ನಿಲುವು

ಕೇಂದ್ರ ಸರಕಾರ ಕಡಿಮೆ ಬೆಲೆ ನಿರ್ಧರಿಸುವಾಗ, ರಾಜ್ಯ ಸರಕಾರ ರೈತರ ಚಳುವಳಿ, ಅವರ ಬೇಡಿಕೆ ಹಾಗೆಯೇ ಉತ್ಪಾದನೆಗೆ ಆಗುವ ಹೆಚ್ಚು ಖರ್ಚು ಮತ್ತು ಬಹಿರಂಗ ಮಾರ್ಕೆಟ್ಟಿನಲ್ಲಿಯ ಸಕ್ಕರೆಯ ಬೆಲೆಗಳನ್ನು ಗಮನಿಸಿ 1980-81ರಲ್ಲಿ ಒಂದು ಟನ್ನಿಗೆ ರೂ. 165ರಂತೆ, ಆನಂತರದ ವರ್ಷಗಳಲ್ಲಿ ರೂ. 210 ಸಂದಾಯ ಮಾಡಲು ಕಾರ್ಖಾನೆಗಳ ಮಾಲಿಕರಿಗೆ ಆದೇಶ ನೀಡಿದ್ದನ್ನು ಅವರು ಒಪ್ಪಿಕೊಂಡಿದ್ದರು. ಸಕ್ಕರೆಯ ಬೆಲೆ ರೂ. 550 ಇದ್ದಾಗ ಯಾವ ರೀತಿಯ ತಕರಾರು ಮಾಡದ ಕಾರ್ಖಾನೆ ಮಾಲಿಕರು ಸಕ್ಕರೆಯ ಬೆಲೆ ಕಡಿಮೆಯಾದಾಗ ರೈತರಿಗೆ ಕೈಕೊಟ್ಟಿದ್ದಾರೆ. ಈಗ ರೂ. 10-15 ಕೋಟಿ ರೈತರಿಗೆ ಸಲ್ಲ ತಕ್ಕ ಹಣ ಬಾಕಿ ಉಳಿದಿದೆ.

ನಮ್ಮ ರಾಜ್ಯದಲ್ಲಿ 23 ಸಕ್ಕರೆ ಕಾರ್ಖಾನೆಗಳಿದ್ದು, ಅವುಗಳ ಪೈಕಿ 13 ಸಹಕಾರಿ ರಂಗದಲ್ಲೂ, 1 ಸರಕಾರದ್ದೂ, 2 ಜಂಟೀ ಕ್ಷೇತ್ರದಲ್ಲೂ, ಉಳಿದವು ಖಾಸಗೀ ಕ್ಷೇತ್ರದಲ್ಲೂ ಇವೆ. ಈ ಕಾರ್ಖಾನೆಗಳೆಲ್ಲ ಹಾನಿ ತೋರಿಸುತ್ತಿವೆ. ಸಹಕಾರಿ ಕ್ಷೇತ್ರದ ಕಾರ್ಖಾನೆಗಳ ಒಟ್ಟು ಹಾನಿ ರೂ. 37.80 ಕೋಟಿ. ಸರಕಾರಿ ಕ್ಷೇತ್ರದ ಕಾರ್ಖಾನೆ 80-81ರಲ್ಲಿ ರೂ. 2.13 ಕೋಟಿ ಲಾಭ ತೋರಿಸಿದ್ದರೂ, 82-83ರಲ್ಲಿ ರೂ. 1.49 ಕೋಟಿ ಹಾನಿಯಾಗಿದೆಂದು ಪ್ರಕಟಿಸಿದೆ.

ಬಂಡವಾಳಶಾಹಿ ನೀತಿಯ ಪರಿಣಾಮ

ಕೇಂದ್ರ ಸರಕಾರ ಅನುಸರಿಸುತ್ತಿರುವ ಬಂಡವಾಳಶಾಹಿನೀತಿ, ಅಸಮರ್ಪಕ ರಫ್ತುಯೋಜನೆ, ತಪ್ಪಾದ ಒಕ್ಕಲತನ ನೀತಿಯೇ ಈ ಬಿಕ್ಕಟ್ಟಿಗೆ ಕಾರಣ. ಜಗತ್ತಿನಲ್ಲಿ ಹಾಗೂ ದೇಶದಲ್ಲಿ ಮಾರಾಟವಾಗತಕ್ಕ ಸಕ್ಕರೆ ಎಷ್ಟು ನಮಗೆ ಲಭ್ಯವಾಗಬಹುದಾದ ವಿದೇಶಿ ಮಾರ್ಕೆಟ್ಟು, ಅಲ್ಲಿಯ ಧಾರಣೆ ಇವುಗಳ ಸ್ಪಷ್ಟ ಚಿತ್ರ ಸರಕಾರಕ್ಕಿರಬೇಕಾಗಿದೆ. ವಿದೇಶಿ ವಿನಿಮಯಗಳಿಸುವ ಉದ್ದೇಶದಿಂದ ಕೇಂದ್ರ ಸರಕಾರ ವಿದೇಶಕ್ಕೆ ಬಹಳ ಕಡಿಮೆಬೆಲೆಯಲ್ಲಿ ಅಂದರೆ ಕೆ.ಜಿ.ಗೆ ಒಂದು ರೂಪಾಯಿಯಂತೆ, (ನಮ್ಮ ದೇಶದಲ್ಲಿ ಅದರ ಬೆಲೆ ರೂ. 5 ರಿಂದ 8ರ ವರೆಗಿದ್ದಾಗ) ಮಾರಾಟ ಮಾಡಿದ್ದರು. ಸಕ್ಕರೆ ಕಾರ್ಖಾನೆಯ ಗುತ್ತೇದಾರಿ ಬಂಡವಾಳದಾರರಾದ ಸೋಮಾನಿಯಂಥವರಿಗೆ ಹೆಚ್ಚು ಲಾಭ ಸಿಗುವಂತೆ ಬಹಿರಂಗ ಪೇಟೆಯಲ್ಲಿ ಸಕ್ಕರೆ ಬೆಲೆ ಹೆಚ್ಚಾಗುವಂತೆ ಮಾಡಿದ್ದಷ್ಟೇ ಅಲ್ಲದೆ ಪ್ರತಿ ವರ್ಷ ಲೆವಿ ಬೆಲೆಯನ್ನು ಹೆಚ್ಚಿಸಿ ಗ್ರಾಹಕರಿಗೆ ಅನ್ಯಾಯಮಾಡಿದರು.

ವಿದೇಶದಲ್ಲಿ ಭಾರತದ ಸಕ್ಕರೆಗೆ ಹೆಚ್ಚು ಬೇಡಿಕೆಯಿಲ್ಲ. ನಮ್ಮ ದೇಶದಲ್ಲಿ ಹೆಚ್ಚು ಸಕ್ಕರೆ ಉತ್ಪಾದನೆಯಾಗುತ್ತಿದೆ. 80-81ರಲ್ಲಿ ಕರ್ನಾಟಕದ ಸಕ್ಕರೆ ಉತ್ಪಾದನೆ 3.70 ಲಕ್ಷ ಟನ್ ಇತ್ತು. 81-82ರಲ್ಲಿ ಅದು 6.47ಲಕ್ಷ ಟನ್ನನಷ್ಟಾಗಿದೆ. ಇಡೀ ದೇಶದ ಉತ್ಪಾದನೆ 84.35ಲಕ್ಷ ಟನ್ ನಮ್ಮ ದೇಶದಲ್ಲಿ ಒಟ್ಟು 55ಲಕ್ಷ ಟನ್ ಮಾರಾಟವಾಗುತ್ತದೆ. ವಿದೇಶ ವ್ಯಾಪಾರ ಕುಂಠಿತಗೊಂಡಿರುವುದರಿಂದ ಪರಿಸ್ಥಿತಿ ಗಂಭೀರವಾಗಿರುವುದರಲ್ಲಿ ಸಂಶಯವಿಲ್ಲ.

ಆದರೆ ಜನರಿಗೆ ಹೆಚ್ಚು ಸಕ್ಕರೆಬೇಕು. ಅದನ್ನು ಲೆವಿ ಮೂಲಕ ಒದಗಿಸಿದರೆ ಹೆಚ್ಚು ಸಕ್ಕರೆ ಮಾರಾಟವಾಗಲು ಸಾಧ್ಯ. ಸರಕಾರದ ಸಕ್ಕರೆ ನೀತಿ ಅಸಮರ್ಪಕವಾಗಿದೆ. ಸರಿಯಾದ ಯೋಜನೆಯಿಲ್ಲ. ನಿರ್ದಿಷ್ಟ ನಿಲುವೆಯಿಲ್ಲ. ಕಬ್ಬುಬೆಳೆಗಾರರು ಹೆಚ್ಚು ಬೆಲೆ ಕೇಳಿದಾಗ, ಕಾರ್ಖಾನೆಗಳಿಗೆ ಹಾನಿಯಾಗುತ್ತಿದೆಂದು ಹೇಳುವ ಸರಕಾರ, ರಾಜಕೀಯ ಒತ್ತಡದಿಂದಾಗಿ ಹೊಸ ಸಕ್ಕರೆ ಕಾರ್ಖಾನೆಗಳಿಗೆ ಲೈಸೆನ್ಸ್ ಕೊಡುತ್ತಿದೆ. ಇದರರ್ಥವೇನು? ಕಾರ್ಖಾನೆಗಳಿಗೆ ಸಾಕಷ್ಟು ಲಾಭಸಿಗುತ್ತಿದೆಂದಲ್ಲವೇ? ಹಾಗಿದ್ದರೆ ಸಕ್ಕರೆ ಕಾರ್ಖಾನೆ ಮಾಲಕರು ಬೆಳೆಗಾರರಿಗೆ ಹಣಪಾವತಿ ಯಾಕೆ ಮಾಡುತ್ತಿಲ್ಲ? ಜನರು ವಿಚಾರ ಮಾಡತಕ್ಕ ವಿಷಯ ಇದಾಗಿದೆ.

ವಿದೇಶ ಮತ್ತು ನಮ್ಮ ದೇಶದಲ್ಲಿ ಸಕ್ಕರೆ ಉತ್ಪಾದನೆ ಹೆಚ್ಚಾದ ಕಾರಣ ಕಾರ್ಖಾನೆಗಳು ಬಿಕ್ಕಟ್ಟನ್ನೆದುರಿಸಬೇಕಾದಂಥ ಪರಿಸ್ಥಿತಿ ಉಂಟಾಗಿದ್ದರೆ ಅದಕ್ಕೆ ಬೇರೆ ಪರಿಹಾರ ಕಂಡುಹಿಡಿಯಲು ಸಾಧ್ಯವಿದೆ. ಬಂಡವಳಶಾಹಿ ಸರಕಾರದ ಒಕ್ಕಲುತನ, ಉದ್ಯೋಗ ನೀತಿಯ ವೈಫಲ್ಯತೆಯನ್ನು ಇಲ್ಲಿ ಕಾಣಬಹುದು. ದೇಶದ ಆಹಾರ ಧಾನ್ಯಗಳ ಸಕ್ಕರೆ ಮತ್ತಿನ್ನಿತರ ವಸ್ತುಗಳ ಆವಶ್ಯಕತೆಗಳನ್ನು ಕಂಡು ಹಿಡಿದೇ, ಒಕ್ಕಲತನದ ಧೋರಣೆಯನ್ನು ನಿರ್ಧರಿಸಬೇಕಾಗುತ್ತದೆ. ಸಕ್ಕರೆಯ ಉತ್ಪಾದನೆ ಹೆಚ್ಚಾಗಿ ಉಳಿಯುವುದಾದರೆ 1) ಹೊಸ ಸಕ್ಕರೆ ಕಾರ್ಖಾನೆಗಳಿಗೆ ಲೈಸೆನ್ಸ್ ಕೊಡಬಾರದು 2) ಆಹಾರ ಧಾನ್ಯಗಳು, ಕಾಳು-ಬೇಳೆಗಳ ಅಗತ್ಯವಿದ್ದಾಗ, ಕಬ್ಬು ಬೆಳೆಯುವ ರೈತರು ಅದನ್ನು ಬೆಳೆಸುವುದನ್ನು ನಿಲ್ಲಿಸಿ ಇತರ ಆವಶ್ಯಕ ಆಹಾರ ಧಾನ್ಯಗಳನ್ನು, ಎಣ್ಣೆ ಕಾಳುಗಳನ್ನು ಬೆಳೆಯುವಂತೆ ಪ್ರೋತ್ಸಾಹಿಸುವುದು ಅತ್ಯಗತ್ಯ 3) ಸಕ್ಕರೆ ಉತ್ಪಾದನೆಯಲ್ಲಿಹಾನಿಯಾಗುತ್ತಿದ್ದಾಗ ಅದನ್ನು ಲಾಭದಾಯಕವನ್ನಾಗಿ ಮಾಡಲು ಈಗ ಹಲವಾರು ಯೋಜನೆಗಳಿವೆ. ಖಂಡಸಾರಿ ಸಕ್ಕರೆ ಉತ್ಪಾದಿಸಬಹುದು. ಹಾಗೆಯೇ ಸಕ್ಕರೆ ಉತ್ಪಾದನೆಯಾಗುವಾಗ ಉಂಟಾಗುವ ಹಲವಾರು ಪದಾರ್ಥಗಳಿಂದ ನಿಷೆಯ ಪಾನೀಯಗಳನ್ನೂ, ಅಸಿಟಿಕ್ ಆಸಿಡ್‌ಗಳನ್ನೂ ಉತ್ಪಾದಿಸಬಹುದು. ಕಬ್ಬಿನ ಸಿಪ್ಪೆಯಿಂದ ಪೇಪರು ತಯಾರಿಸಬಹುದು. ಇದಕ್ಕೆಲ್ಲ ಸರಿಯಾದ ಯೋಜನೆಯನ್ನು ಕೇಂದ್ರ ಸರಕಾರ ತಯಾರಿಸದೇ ಇರುವುದರಿಂದಲೇ ದೇಶಕ್ಕೆ ಉಪಯೋಗವಾಗಬಹುದಾದ ಕಬ್ಬಿನ ಇತರೇ ವಸ್ತುಗಳು ನಾಶದ ದಾರಿಯನ್ನು ಹಿಡಿಯಬೇಕಾಗಿದೆ.

ಹೆಚ್ಚು ಸಕ್ಕರೆ ಉತ್ಪಾದನೆಯಿಂದ ಬಿಕ್ಕಟ್ಟುಂಟಾದಾಗ ಅದನ್ನೆದುರಿಸಲು ಬ್ರೆಜಿಲ್ ಸರಕಾರ ಯಶಸ್ವಿ ಕಾರ್ಯಕ್ರಮವೊಂದನ್ನು ಕೈಕೊಂಡಿದೆ. ಕಬ್ಬಿನಿಂದ ಆಲ್ಕೋಹಾಲ್ ತಯಾರಿಸುವ ಯಶಸ್ವಿ ಯೋಜನೆ ಕೈಕೊಂಡಿದ್ದಾರೆ. ಅದನ್ನು ಪೆಟ್ರೋಲಿಗೆ ಬದಲಿಯಾಗಿ ಉಪಯೋಗಿಸುತ್ತಿದ್ದಾರೆ. ಹೀಗಾಗಿ ಪೆಟ್ರೋಲ್ ಆಮದಿಗಾಗಿ ಖರ್ಚಾಗುವ ಕೋಟ್ಯಾವಧಿ ಹಣವನ್ನು ಉಳಿಸಿದ್ದಾರೆ.

ಆದರೆ ನಮ್ಮ ಕೇಂದ್ರದ ಬಂಡವಾಳ ಶಾಹಿ ಸರಕಾರ ಅಂಥ ಯಾವುದೇ ಯೋಜನೆಗಳನ್ನು ಕೈಗೊಳ್ಳುತ್ತಿಲ್ಲ.

ಸಕ್ಕರೆ ಉತ್ಪಾದನೆ ಹೆಚ್ಚಳದಿಂದ ರೈತರಾಗಲೀ ಕಾರ್ಖಾನೆಗಳಾಗಲಿ ಚಿಂತಿಸುವ ಕಾರಣವಿಲ್ಲ. ಆದರೆ ಸಂಬಂಧಪಟ್ಟ ಸರ್ಕಾರ ಅದನ್ನೆದುರಿಸಲು ಬೇಕಾದ ಯೋಜನೆ ಕೈಗೊಳ್ಳುವುದು ಮಾತ್ರ ಅತ್ಯಗತ್ಯ.

ಕುಂದಾಪುರ :

ಎಸ್. ಎಫ್. ಐ. ನಿಂದ 'ಬೇಡಿಕೆ ದಿನಾಚರಣೆ'

ಆಗಸ್ಟ್ 1 ರಂದು ಕುಂದಾಪುರದಲ್ಲಿ ಎಸ್.ಎಫ್.ಐ. "ಬೇಡಿಕೆ ದಿನ"ವನ್ನು ಆಚರಿಸಲಾಯಿತು. ಇದರ ಅಂಗವಾಗಿ ಸಾಂಕೇತಿಕ ಪ್ರದರ್ಶನ ಮತ್ತು ಸಭೆಗಳು ನಡೆದವು.

ಭಂಡಾರ್ಕರ್ಸ್ ಕಾಲೇಜ್ ಬಳಿ ಎಸ್. ಎಫ್. ಐ. ಧ್ವಜದೊಂದಿಗೆ ಮುಖ್ಯ ಬೇಡಿಕೆಗಳ ಭಿತ್ತಿ ಪತ್ರವನ್ನು ಪ್ರದರ್ಶಿಸಿ, ಘೋಷಣೆಗಳನ್ನು ಕೂಗಲಾಯಿತು. ಬೆಳಗ್ಗೆ ವಿದ್ಯಾರ್ಥಿಗಳು ಕಾಲೇಜ್‌ಗೆ ಬರುತ್ತಿರುವ ಸಮಯದಲ್ಲಿ ಪ್ರವೇಶ ದ್ವಾರದ ಬಳಿ ಈ ಕಾರ್ಯಕ್ರಮವನ್ನು ಜರುಗಿಸಿ, ಹೆಚ್ಚಿನ ಪ್ರಚಾರವನ್ನು ನಡೆಸಲಾಯಿತು. ಇಂತಹ ಕಾರ್ಯಕ್ರಮ ಇಲ್ಲಿ ಪ್ರಥಮ ಬಾರಿಗೆ ಜರುಗುತ್ತಿದ್ದು ವಿದ್ಯಾರ್ಥಿಗಳು ಆಸಕ್ತಿಯಿಂದ ಇದನ್ನು ವೀಕ್ಷಿಸಿದರು. ರಾಜ್ಯ ಸಮಿತಿ ಸದಸ್ಯ ಹಾಗೂ ದ.ಕ. ಜಿಲ್ಲಾ ಸಮಿತಿ ಅಧ್ಯಕ್ಷ ಕೆ. ವಿಶ್ವನಾಥ್ ಇವರ ನೇತೃತ್ವದಲ್ಲಿ ನಡೆದ ಪ್ರದರ್ಶನ ಕಾರ್ಯಕ್ರಮದ ನಂತರ, ಕಾಲೇಜ್ ಪ್ರಾಂಶುಪಾಲಕರನ್ನು ಭೇಟಿಯಾಗಿ ರಾಜ್ಯ ಮಟ್ಟದ 25 ಬೇಡಿಕೆಗಳುಳ್ಳ ಪಟ್ಟಿಯನ್ನು ಅರ್ಪಿಸಲಾಯಿತು.

ಬಸ್ರೂರಿನ ಶ್ರೀ ಶಾರದಾ ಕಾಲೇಜ್ ಎದುರು ಸಾಂಕೇತಿಕ ಪ್ರದರ್ಶನ ನಡೆದು ಭಿತ್ತಿಪತ್ರ ಪದರ್ಶನದೊಡನೆ ಘೋಷಣೆಗಳನ್ನು ಕೂಗಲಾಯಿತು. ಶಾರದಾ ಕಾಲೇಜ್ SFI ಸಮಿತಿ ಕಾರ್ಯದರ್ಶಿ ನಾರಾಯಣ ಆಚಾರ್ ಇವರ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೆ. ವಿಶ್ವನಾಥ ಸಹ ಭಾಗವಹಿಸಿ ಬೇಡಿಕೆ ದಿನದ ಮಹತ್ವವನ್ನು ವಿವರಿಸಿದರು. 25 ಬೇಡಿಕೆಗಳುಳ್ಳ ಪಟ್ಟಿಯಲ್ಲದೆ ಈ ಕಾಲೇಜ್ ವಿದ್ಯಾರ್ಥಿಗಳಿಗೆ ರಿಯಾಯಿತಿ ದರದ ಕ್ಯಾಂಟೀನ್ ಸೌಲಭ್ಯ ಹಾಗು ಸೈಕಲ್ ನಿಲ್ದಾಣಗಳನ್ನು ಒದಗಿಸಬೇಕೆಂಬ ಬೇಡಿಕೆ ಪಟ್ಟಿಯನ್ನು ಪ್ರಾಂಶುಪಾಲರಿಗೆ ಅರ್ಪಿಸಲಾಯಿತು..

ಕುಂದಾಪುರದಲ್ಲಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿಗಳ ವಿದ್ಯಾರ್ಥಿ ನಿಲಯದಲ್ಲಿ ಬೇಡಿಕೆ ದಿನ ಅಂಗವಾಗಿ ಸಭೆಯೊಂದು ಕೆ. ವಿಶ್ವನಾಥರ ನೇತೃತ್ವದಲ್ಲಿ ನಡೆಯಿತು. ಮುಖ್ಯವಾಗಿ ಕ್ಯಾರಿ ಓವರ್ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸೌಲಭ್ಯವನ್ನು ನಿರಾಕರಿಸುವುದರಿಂದಾಗುವ ಅನಾನುಕೂಲಗಳನ್ನು ವಿವರಿಸಿ, ಇದರ ವಿರುದ್ಧ ಕ್ರಮೇಣ ಹೋರಾಟಕ್ಕೆ ಮುಂದಾಗಬೇಕೆಂದು ಹೇಳಿದರು.

ಬೆಲೆ ಏರಿಕೆ ವಿರುದ್ಧ ಹೋರಾಟ

(2ನೇ ಪುಟದಿಂದ)

ರಾಜ್ಯ ಸಮಿತಿಯ ಕರೆಯ ಮೇರೆಗೆ ಮೈಸೂರು ನಗರದಲ್ಲಿ ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ "ಆಹಾರ ಪದಾರ್ಥಗಳ ಬೆಲೆ ಏರಿಕೆ ವಿರುದ್ಧ" ಬೆಳಿಗ್ಗೆ 11 ಗಂಟೆಯಿಂದ ಸಂಜೆ 5 ಗಂಟೆಯ ತನಕ ಧರಣಿ ಸತ್ಯಾಗ್ರಹ ನಡೆಸಲಾಯಿತು. ಮತ್ತು ಜಿಲ್ಲಾಧಿಕಾರಿಗಳಿಗೆ ಮನವಿಯನ್ನು ಸಲ್ಲಿಸಲಾಯಿತು.

ಮೈಸೂರು ನಗರದಲ್ಲಿ ಅಕ್ಕಿ ವಿತರಣೆ ಸಮರ್ಪಕವಾಗಿಲ್ಲದೆ ಇರುವುದು, ಎಣ್ಣೆ ಬೆಲೆಗಳು ಗಗನಕ್ಕೆ ಏರುತ್ತಿರುವುದರ ಬಗ್ಗೆ ಗಮನ ಸೆಳೆಯಲಾಯಿತು. ಕಳ್ಳ ದಸ್ತಾನುಗಾರರ ಮೇಲೆ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಲಾಯಿತು.

ಈ ಧರಣಿ ಸತ್ಯಾಗ್ರಹದಲ್ಲಿ ಸ್ಥಳೀಯ ಪಕ್ಷದ ಮತ್ತು ಸಿ. ಐ. ಟಿ. ಯು ನ ಮುಖಂಡರು ಭಾಗವಹಿಸಿದ್ದರು.

ಕೊಡಗು :

ರಾಜ್ಯ ಸಮಿತಿಯು ನೀಡಿದ ಕರೆಗನುಸಾರವಾಗಿ ಕೊಡಗು ಜಿಲ್ಲೆಯ ವೀರಾಜಪೇಟೆ ಮತ್ತು ಸೋಮವಾರ ಪೇಟೆಗಳಲ್ಲಿ ದಿನಾಂಕ 11-8-83 ರಂದು ಬೆಲೆಯೇರಿಕೆ ವಿರೋಧಿ ದಿನವನ್ನು ಆಚರಿಸಲಾಯಿತು. ಎರಡೂ ಕಡೆಗಳಲ್ಲಿ ಮೆರವಣಿಗೆ ನಡೆದು ಮನವಿ ಅರ್ಪಿಸಿರುವುದಾಗಿ ವರದಿಯಾಗಿದೆ.

ಸಕಲೇಶಪುರ :

ಆಹಾರ ಧಾನ್ಯಗಳ ಮತ್ತು ಜೀವನಾವಶ್ಯಕ ವಸ್ತುಗಳ ಬೆಲೆಗಳು ಏರುತ್ತಿರುವುದನ್ನು ಪ್ರತಿಭಟಿಸಿ ಬೆಲೆ ಏರಿಕೆ ವಿರೋಧಿ ದಿನಾಚರಣೆ ಆಚರಿಸುವಂತೆ ರಾಜ್ಯ ಸಮಿತಿಯು ನೀಡಿದ ಕರೆಗನುಗುಣವಾಗಿ ದಿನಾಂಕ 11-8-83ರಂದು ಸಕಲೇಶಪುರದಲ್ಲಿ ಸುಮಾರು 500 ಜನರ ಮೆರವಣಿಗೆ ನಡೆಯಿತು. ನಂತರ ಮನವಿ ಅರ್ಪಿಸಲಾಯಿತೆಂದು ವರದಿಯಾಗಿದೆ. ಇದರ ನೇತೃತ್ವವನ್ನು ಕಾ. ಸುಕುಮಾರ್ ವಹಿಸಿದ್ದರು.

ವಿಕ್ರಾಂತ್ ಟೈರ್ಸ್ ಬೀಗಮುದ್ರೆ ತೆರವು :

ಸಿ. ಐ. ಟಿ. ಯು. ಗೆ ಮಹತ್ವದ ಗೆಲುವು

ಕರ್ನಾಟಕದ ಏಕಮಾತ್ರ ಟೈರ್ ತಯಾರಕ ಘಟಕವಾದ "ವಿಕ್ರಾಂತ್ ಟೈರ್ಸ್" ಮೈಸೂರಿನ ಕಾರ್ಮಿಕ ವರ್ಗದ ನಡುವೆ ಯಾವತ್ತೂ ಸುದ್ದಿಯಲ್ಲಿದೆ. ಸಿ ಐ ಟಿ ಯು ನೇತೃತ್ವದಲ್ಲಿ ಸಂಘಟಿತವಾಗಿರುವ ಸುಮಾರು 2 ಸಾವಿರದಷ್ಟಿರುವ ಈ ಕಾರ್ಮಿಕ ವರ್ಗ ಐಕ್ಯತೆ, ಸಂಘಟನೆ ಮತ್ತು ಹೋರಾಟದ ಸಂಕೇತವಾಗಿದ್ದಾರೆ. ಇದನ್ನು ಸಹಿಸದ ಆಡಳಿತ ವರ್ಗ ಸಂಘ ಒಡೆಯಲು ನಾನಾ ಪಿತೂರಿ ನಡೆಸುತ್ತಲೇ ಬರುತ್ತಿದ್ದಾರೆ. ಇದಕ್ಕೆ ಉದಾಹರಣೆ-ಇತ್ತೀಚೆಗೆ ಸಾರಲಾದ (8-8-83) ಬೀಗಮುದ್ರೆ. ಆದರೆ ಸುಸಂಘಟಿತ ಕಾರ್ಮಿಕರು ಎದೆಗುಂದಲಿಲ್ಲ. ನ್ಯಾಯಬಾಹಿರವಾಗಿ ಘೋಷಿಸಿದ ಬೀಗ ಮುದ್ರೆ ತೆರವಿಗೆ ಶಾಂತಿಯುತವಾಗಿಯೇ ಹೋರಾಟ ನಡೆಸಿದರು, ಪ್ರಚಾರ ನಡೆಸಿದರು. ಸುಮಾರು 400 ಕಾರ್ಮಿಕರು ಮೈಸೂರಿನಿಂದ 140 ಕಿ.ಮೀ ದೂರದ ಬೆಂಗಳೂರಿಗೆ ಸೈಕಲ್ ಜಾಥಾ ಹೊರಟು-ವಿಧಾನ ಸೌಧದೊಳಗೆ ತಮ್ಮ ಬೇಡಿಕೆ ಮೊಳಗುವಂತೆ ಮಾಡಿದರು. ಮುಖ್ಯಮಂತ್ರಿಗಳಿಗೆ, ಕಾರ್ಮಿಕ ಮಂತ್ರಿಗಳಿಗೆ ಮನವಿ ಸಲ್ಲಿಸಿದರು. ಕಾರ್ಮಿಕರ ಐಕ್ಯತೆ ಮತ್ತು ಹೋರಾಟ ಮನೋಭಾವವನ್ನು ಕಂಡ ಸಂಸ್ಥೆಯ ಆಡಳಿತ ವರ್ಗ ಬೆದರಿ ಮಾತುಕತೆಗೆ ಮುಂದಾಯಿತು. ಕಾರ್ಮಿಕ ವರ್ಗದ ಸಮ್ಮುಖದಲ್ಲಿ, ವಿಕ್ರಾಂತ್ ಟೈರ್ಸ್ ಎಂಪ್ಲಾಯಿಸ್ ಅಸೋಸಿಯೇಶನ್‌ನ ಸಲಹೆಗಾರರಾದ ಕಾ। ಎಸ್. ಸೂರ್ಯನಾರಾಯಣರಾವ್ ನೇತೃತ್ವದಲ್ಲಿ ಮಾತುಕತೆ ನಡೆದು, ಆಡಳಿತ ವರ್ಗವು ಬೀಗ ಮುದ್ರೆ ತೆರೆಯಲು ಮುಂದಾಯಿತು. ಕಾರ್ಮಿಕ ವರ್ಗ ಅರ್ಥ ಗೆಲುವನ್ನು ಸಾಧಿಸಿತು.

ಸರ್ವ ಸದಸ್ಯರ ಸಭೆ :

21-8-1983ರಂದು ಲಾಕೌಟ್ ತೆರವಿನ ವಿಚಾರ ಕಾರ್ಮಿಕರಿಗೆ ತಿಳಿಯಪಡಿಸಲು ವಿಕ್ರಾಂತ್ ಟೈರ್ಸ್ ಸರ್ವ ಸದಸ್ಯರ ಸಭೆಯನ್ನು ಕರೆಯಲಾಯಿತು. ಕಾರ್ಮಿಕರೆಲ್ಲರೂ ಉತ್ಸಾಹದಿಂದ ಭಾಗವಹಿಸಿದ್ದರು. ಸಭೆಯನ್ನುದ್ದೇಶಿಸಿ ಮಾತನಾಡಿದ ಕಾ। ಸೂರಿಯವರು ಧೀಮಂತ ಹೋರಾಟ ನಡೆಸಿದ ಕಾರ್ಮಿಕರನ್ನು ಅಭಿನಂದಿಸಿ, ಮಾತುಕತೆಯ ವಿವರಣೆಯನ್ನು ನೀಡಿದರು. ವಿರೋಧಿಗಳ ಅಪಪ್ರಚಾರಕ್ಕೆ ಬಲಿಬೀಳದೆ ಕಾರ್ಮಿಕರು ಸಂಘಟಿತವಾಗಿ ಮುನ್ನಡೆಯುವಂತೆಯೂ, ರಾಜಕೀಯವಾಗಿ ಪ್ರಜ್ಞಾವಂತರಾಗುವಂತೆಯೂ ವಿನಂತಿಸಿದರು. ಸಭೆಯನ್ನುದ್ದೇಶಿಸಿ ಮೈಸೂರಿನ ಸಿ. ಐ. ಟಿ. ಯು. ಮುಖಂಡರಾದ ಕಾ। ಎಂ. ಎನ್. ಉಗ್ರಪ್ಪನವರು ಮಾತನಾಡಿ ವಿಕ್ರಾಂತ್ ಕಾರ್ಮಿಕರು ಮೈಸೂರಿನ ಕಾರ್ಮಿಕರಿಗೆ ಮಾರ್ಗದರ್ಶಿಗಳಾಗುವಂತೆ ಕೇಳಿಕೊಂಡರು. ಸಂಘದ ಅಧ್ಯಕ್ಷರಾದ ಕಾ। ಬಲವೇಂದ್ರ ಅಧ್ಯಕ್ಷತೆ ವಹಿಸಿದ್ದರು. ಕಾ। ಬಸಪ್ಪ ಸ್ವಾಗತಿಸಿದರು. ಪ್ರಧಾನ ಕಾರ್ಯದರ್ಶಿ ಕಾ। ರಾಜೇಂದ್ರ ವಂದನೆ ಸಲ್ಲಿಸಿದರು.

ರೆವಿನ್ಯೂ ಖಾತೆ ಪುನರ್ರಚಿಸಲ್ಪಡಬೇಕು

(1ನೇ ಪುಟದಿಂದ)

ಯಲ್ಲಿದ್ದಾರೆ ತಾನೆ ? ಅಂತಹವರಿಗೆ ಸರಕಾರವು ಭೂಸುಧಾರಣೆಯ ಮೂಲಕ ಭೂಮಿ ಹಂಚಿಕೆ ಏಕೆ ಮಾಡಲಿಲ್ಲ ? ಮಾತ್ರವಲ್ಲ, ಅವರೂ, ಇತರ ಭೂರಹಿತ ಲಕ್ಷಾಂತರ ಮಂದಿ ಹಳ್ಳಿಯ ಬಡವರು 'ಬಂಜರು ಭೂಮಿಯಲ್ಲಿ ವಾಸವಾಗಿದ್ದ ಕೃಷಿ ವಗೈರೆ ಮಾಡುತ್ತಾ ಬಂದ ಭೂಮಿಯನ್ನು ಬಗರ್ ಹುಕುಂ ಭೂಮಿಯನ್ನು — ಈ ತನಕವೂ ಹಕ್ಕು ಪತ್ರ ಕೊಟ್ಟು ಕ್ರಮಬದ್ಧಗೊಳಿಸಲಿಲ್ಲ. ಸರ್ಕ್ಯೂಲರ್‌ಗಳ ಮೇಲೆ ಸರ್ಕ್ಯೂಲರ್‌ಗಳು ಈ ಬಗ್ಗೆ ಒಂದು ಹೋದರೂ, ಈ ಸಾಮಾನ್ಯ ಜನರ ಗತಿ ಮಾತ್ರ ಶೋಚನೀಯ. ತಾಲ್ಲೂಕು ಆಫೀಸುಗಳಿಗೆ ಹೋದರೆ ಇಂತಹವರ ಲೆಕ್ಕವೇ ಕಾಣುವುದಿಲ್ಲ. ಅವರ ಅರ್ಜಿಗಳ ಸುಳಿವೇ ಕಾಣುವುದಿಲ್ಲ. ಅವರಿಂದ ಮಾತ್ರ ರೆವಿನ್ಯೂ ಸಿಬ್ಬಂದಿಗಳಿಂದ ದಶಕಗಳಲ್ಲಿ ಹಣ ಮಾತ್ರ ವಿವಿಧ ರೀತಿಯಲ್ಲಿ ವಸೂಲಾತಿ ಮಾತ್ರ ನಡೆಯುತ್ತಲೇ ಇದೆ…………"

ಜನತಾ ಸರಕಾರವು ಈ ಎಲ್ಲಾ ಅಂಶಗಳಿಗೆ ಗಮನ ಕೊಟ್ಟು ಜನರಿಗೆ ಸಮಾಧಾನ ಉಂಟುಮಾಡಬೇಕು. ಆಗ ಮಾತ್ರ ಭೂಸುಧಾರಣೆ ಜಾರಿಯಾಯಿತು ಎನ್ನಬಹುದು.

ಭಾಷಣವನ್ನು ಮುಂದುವರೆಸುತ್ತಾ ಅವರು ರೆವಿನ್ಯೂ ಖಾತೆಯ ಮೇಲೆ ಸರಕಾರವು ವಹಿಸುವ ಕೆಲಸ ಕಾರ್ಯಗಳ ಹೊಣೆಯನ್ನು ಕಡಿಮೆ ಮಾಡಿ ಆ ಖಾತೆಯ ಜವಾಬ್ದಾರಿಯಿಂದ ತನ್ನ ಕೆಲಸಕಾರ್ಯ ಮಾಡುವಂತೆ ಪುನರ್ ವ್ಯವಸ್ಥೆ ಮಾಡಬೇಕೆಂದು ಕರೆಕೊಟ್ಟರು. ಈಗಿನ ಏರ್ಪಾಡಿನಲ್ಲಿ ಯಾರಿಗೂ ಜವಾಬ್ದಾರಿ ಇಲ್ಲವೆಂದ ಹಾಗಿದೆ. ಹಣ ಕೊಟ್ಟರೆ ಕೆಲಸವೆಂಬಂತಿದೆ. ಆದರಲ್ಲೂ ಎಲ್ಲಾ ಮುಖ್ಯ ವಿವರಗಳು ಗ್ರಾಮಲೆಕ್ಕಿಗರ ಕೈಯಲ್ಲೇ ಸಿಗಬೇಕೆಂದಿರುವ ಈಗಿನ ಏರ್ಪಾಡಿನಿಂದಾಗಿ, 'ಗ್ರಾಮಲೆಕ್ಕಿಗರ ಸ್ಥಾನ' ಅತಿ ಗುರುತರವಾಗಿದೆ. ಇದನ್ನರಿತೇ ಆ ಸ್ಥಾನದಲ್ಲಿರುವವರು ಗ್ರಾಮದಲ್ಲಿ ಗ್ರಾಮಸ್ಥರಿಗೆ ಸಿಗುವುದೇ ಇಲ್ಲ.- ಅವರನ್ನು ಹುಡುಕಿ ಹುಡುಕಿ ಗ್ರಾಮಸ್ಥರು ಬೇಸತ್ತು ಹೋಗುವ ಅದರಿಂದಾಗಿ ಹಲವು ರೀತಿಯಲ್ಲಿ ಶೋಷಿಸಲ್ಪಡುವ ಈಗಿನ ಸ್ಥಿತಿಗೆ ಬೇಗನೇ ಪೂರ್ಣ ವಿರಾಮ ಹಾಕದೆ ಇದ್ದರೆ ಜನತಾ ಸರಕಾರಕ್ಕೆ ಒಳ್ಳೆಯ ಹೆಸರು ಬರುವುದು ಅಸಾಧ್ಯ. ಬ್ರಿಟಿಷರ ಆಡಳಿತ ಎಂದರೆ ಬರಗಾಲ ಮತ್ತು ಅತಿ ಪ್ರವಾಹಗಳ ಆಡಳಿತೆ ಎಂದು ನಾವು ಸ್ವಾತಂತ್ರ್ಯದ ಹೋರಾಟದ ಕಾಲದಲ್ಲಿ ಗುಡುಗುತ್ತಿದ್ದೆವು. ಸ್ವಾತಂತ್ರ್ಯ ಸಿಕ್ಕಿದರೆ ನಮ್ಮ ನಾಡನ್ನು ಈ ಪ್ರಾಕೃತಿಕ ಪಿಡುಗುಗಳಿಂದ ಮುಕ್ತಮಾಡುತ್ತೇವೆ ಎಂದು ನಾವು ಜನತೆಗೆ ಆಶ್ವಾಸನೆಕೊಟ್ಟಿದ್ದೆವು. ಆದರೆ ಈಗ ಸ್ವಾತಂತ್ರ್ಯ ಬಂದು 35 ವರ್ಷಗಳ ನಂತರ ಈ ಕುರಿತು ಪರಿಸ್ಥಿತಿ ಏನಾದರೂ ಸುಧಾರಿಸಿದೆಯೋ ಇನ್ನಷ್ಟೂ ಹಾಳಾಗಿದೆ ಎಂದೇ ಹೇಳಬೇಕು. ನಮ್ಮ ರಾಜ್ಯವನ್ನೇ ನೋಡೋಣ 16 ಜಿಲ್ಲೆಗಳು ಬರಗಾಲದಿಂದ ತತ್ತರಿಸಿರುವಾಗ, 2–3 ಜಿಲ್ಲೆಗಳು ಅತಿ ಪ್ರವಾಹದಿಂದ ತೊಳೆದೇ ಹೋಗಿರುವಾಗ, ಸರಕಾರವು ಒಟ್ಟು ಖರ್ಚು ಮಾಡಿದ ಹಣವೆಷ್ಟು ? ಅಂದಾಜು ಮಾಡಿದ್ದು ರೂ. 70 ಕೋಟಿ ವೆಚ್ಚಮಾಡಿದ್ದು ರೂ 20–25 ಕೋಟಿ.

ಈ ವಿಷಯದಲ್ಲಿ ಕೇಂದ್ರ ಸರಕಾರವಂತೂ ತೀರಾ ಬೇಜವಾಬ್ದಾರಿ ನೀತಿಯನ್ನು ಅನುಸರಿಸುತ್ತಿದೆ ನಿಜ ಆದರೆ, ರಾಜ್ಯ ಸರಕಾರವು ಕೇಂದ್ರ ಸರಕಾರದ ಕಡೆಗೆ ಬೊಟ್ಟುಮಾಡಿ ತೋರಿಸಿದರೆ ಸಾಕೇ ? ಈ ಪ್ರಾಕೃತಿಕ ಪಿಡುಗುಗಳಿಂದ ಕೋಟಿಗಟ್ಟಲೆ ಜನತೆ–ಸರಕಾರವೇ ಹೇಳುವ ಹಾಗೆ 2ಕೋಟಿಗಿಂತಲೂ ಅಧಿಕ ಜನತೆ–ತತ್ತರಿಸುತ್ತಿರುವಾಗ. ರಾಜ್ಯಸರಕಾರವು ಜನತೆಯ ಸಹಾಯಕ್ಕೆ ಧಾವಿಸಬೇಡವೇ ?

ಈ ಕುರಿತು ಶಾಶ್ವತವಾದ ಏರ್ಪಾಡುಗಳನ್ನು ಮಾಡಲು ಸಾಧ್ಯವಾಗದಿರುವುದು ನಿಜವಾಗಿ ಅ.ಕ್ಷಮ್ಯ. ಜನತಾ ಸರಕಾರವಾದರೂ ಈ ಬಗ್ಗೆ ಕ್ರಮ ಕೈಗೊಳ್ಳುವುದೇ ?

ರಿಜಿಸ್ಟ್ರೇಶನ್ ಮತ್ತು ಸ್ಟಾಂಪು ವಿತರಣಾ ಕೆಲಸವು ತೀರಾ ಅಸಮರ್ಪಕ ಮಾತ್ರವಲ್ಲ, ಆಕ್ಷೇಪಕರ ರೀತಿಯಲ್ಲಿ ನಡೆಯುತ್ತಿದೆ, " ಉದಾಹರಣೆಗೆ ! ಕಡಿಮೆ ಬೆಲೆಯನ್ನು ಸೂಚಿಸಿ ಭೂಮಿ ಇತ್ಯಾದಿ ರಿಜಿಸ್ಟ್ರಿಮಾಡುವುದರಿಂದ ಸರಕಾರಕ್ಕೆ ಕೋಟ್ಯಂತರ ರೂ. ನಷ್ಟವಾಗುತ್ತದೆ ಮಾತ್ರವಲ್ಲ. ಅರ್ಬನ್ ಸೀಲಿಂಗ್‌ನಂತಹ ಕಾನೂನನ್ನು ಜಾರಿಗೊಳಿಸಿ ಜನರಿಂದ ಭೂಮಿಯನ್ನು ವಶಪಡಿಸುವಾಗ, ಆ ಜನರಬಾಯಿಗೆ 'ಮಣ್ಣು' ಬೀಳುತ್ತದೆ. ಅವರಿಗೆ ನ್ಯಾಯವಾದ ಭೂಮಿಯ ಬೆಲೆ ಸಿಗುತ್ತಿಲ್ಲ. ಅಲ್ಪಸ್ವಲ್ಪ ಭೂಮಿ ಇದ್ದ ಆದರಲ್ಲೂ ವಿಧವೆ ಮೊದಲಾದವರಿಗೆ ತೀರಾ ಅನ್ಯಾಯವಾಗುತ್ತದೆ,

ಈ ಎಲ್ಲಾ ದಿಕ್ಕಿನಲ್ಲಿ ರೇವಿನ್ಯೂ ಖಾತೆಯನ್ನು ತನ್ನ ಕೆಲಸಕಾರ್ಯಗಳನ್ನು ಸುಸೂತ್ರವಾಗಿಮಾಡಬೇಕಾದರ ಈಗಿನ ಖಾತೆಯ ಆಂತರಿಕ ಏರ್ಪಾಡಿನಲ್ಲಿ ಬದಲಾವಣೆಯಾಗಲೇಬೇಕು

ಕಾಂಗ್ರೆಸ್ಸಿನ ದುರಾಡಳಿತೆಯನ್ನು ಕೊನೆಗಾಣಿಸಿದ ಜನತೆಯ ವಿಶ್ವಾಸಕ್ಕೆ ಪಾತ್ರರಾಗಬೇಕಾದರೆ ಜನತಾ ಸರಕಾರ ಈ ಕಾರ್ಯಕ್ರಮಗಳನ್ನು ಮಾಡಲೇಬೇಕು.

ಪಾರ್ಟಿ ರಾಜ್ಯ ಸಮಿತಿಯ ನಿರ್ಣಯಗಳು

ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷದ ಕರ್ನಾಟಕ ರಾಜ್ಯ ಸಮಿತಿಯು ಆಗಸ್ಟ್ 17 ರಿಂದ 19ರ ವರೆಗೆ ಬೆಂಗಳೂರಿನಲ್ಲಿ ಸಭೆ ಸೇರಿ ಈಗಿನ ರಾಜಕೀಯ ಪರಿಸ್ಥಿತಿಯನ್ನು ಪರಿಶೀಲಿಸಿತು. ಕಾ| ಎಸ್. ಕೆ. ಉಪಾಧ್ಯಾಯ ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ವಿಪರೀತವಾಗಿ ಏರುತ್ತಿರುವ ಆಹಾರಧಾನ್ಯಗಳ ಹಾಗೂ ಜೀವನಾವಶ್ಯಕ ವಸ್ತುಗಳ ಬೆಲೆಗಳು ಮತ್ತು ದುಡಿಯುವ ಜನತೆ ಎದುರಿಸುತ್ತಿರುವ ಸಂಕಷ್ಟಗಳ ಕುರಿತು ಸಭೆ ತನ್ನ ತೀವ್ರ ಕಳವಳ ವ್ಯಕ್ತಪಡಿಸಿತು. ಆಗಸ್ಟ್ 11 ರಂದು ಬೆಲೆ ಏರಿಕೆ ವಿರುದ್ಧ ರಾಜ್ಯವ್ಯಾಪೀ ಹೋರಾಟ ನಡೆಸಬೇಕೆಂದು ರಾಜ್ಯ ಸಮಿತಿಯು ನೀಡಿದ ಕರೆಗೆ ಪ್ರತಿಕ್ರಿಯಿಸಿ ರಾಜ್ಯದ ವಿವಿಧ ಭಾಗಗಳಲ್ಲಿ 'ಬೆಲೆ ಏರಿಕೆ ವಿರೋಧಿ ದಿನ'ವನ್ನು ಯಶಸ್ವಿಯಾಗಿ ಆಚರಿಸಿದ್ದಕ್ಕಾಗಿ ರಾಜ್ಯಸಮಿತಿ ಜನತೆಯನ್ನು ಅಭಿನಂದಿಸಿದೆ. ಪಕ್ಷದ ದ. ಕನ್ನಡ ಜಿಲ್ಲಾ ಸಮಿತಿ ಮತ್ತದರ ಘಟಕಗಳು ಬಹುಸಂಖ್ಯೆಯ ಮಹಿಳೆಯರನ್ನೊಳಗೊಂಡಂತೆ ಹತ್ತು ಸಾವಿರ ಮಂದಿಯನ್ನು ಸಂಘಟಿಸಿ ಹೆಚ್ಚಿನ ಪ್ರಮಾಣದಲ್ಲಿ ಅಕ್ಕಿಯನ್ನು ನಗರ–ಗ್ರಾಮಗಳ ಭೇದವಿಲ್ಲದೆ ಒದಗಿಸಬೇಕೆಂದು ಒತ್ತಾಯಿಸಿ ಬಂಧನಕ್ಕೊಳಗಾದುದನ್ನು ಅಭಿನಂದಿಸಿದೆ. ಹೋರಾಟವನ್ನು ಮತ್ತಷ್ಟು ಪ್ರಬಲಗೊಳಿಸಬೇಕೆಂದು ರಾಜ್ಯಸಮಿತಿ ಜನತೆಗೆ ಮನವಿ ಮಾಡಿಕೊಂಡಿದೆ.

ಪಂಚಾಯತ್ ಮತ್ತು ಜಿಲ್ಲಾ ಪರಿಷತ್ ಮಸೂದೆ ಮತ್ತು ಶಿಕ್ಷಣ ಮಸೂದೆಯನ್ನು ವಿಧಾನ ಸಭೆಯಲ್ಲಿ ಮಂಡಿಸಿರುವುದನ್ನು ರಾಜ್ಯ ಸಮಿತಿ ಸ್ವಾಗತಿಸಿದೆ. ಶಿಕ್ಷಣ ಮಸೂದೆಯ ಸೆಕ್ಷನ್ 14 ತೀರಾ ಆಕ್ಷೇಪಾರ್ಹವಾಗಿದೆಯೆಂದು ರಾಜ್ಯಸಮಿತಿ ಅಭಿಪ್ರಾಯಪಟ್ಟಿದೆ. ಶಿಕ್ಷಣದ ಮೂಲಕ ವೈಜ್ಞಾನಿಕ ಮತ್ತು ಜಾತ್ಯಾತೀತ ದೃಷ್ಟಿಕೋನವನ್ನು ಬೆಳೆಸಬೇಕೆಂಬುದು ಮಸೂದೆಯ ಒಂದು ಗುರಿಯಾಗಿದೆ. ಆದರೆ ಮಸೂದೆಯ ಸೆಕ್ಷನ್ 14ರಲ್ಲಿ ನಿರ್ದಿಷ್ಟ ಜಾತಿಯ ಧಾರ್ಮಿಕ ಶಿಕ್ಷಣವನ್ನು ವಿದ್ಯಾರ್ಥಿಗಳಿಗೆ ಖಾಸಗೀ ಶಿಕ್ಷಣ ಸಂಸ್ಥೆಗಳಲ್ಲಿ ಕಡ್ಡಾಯಗೊಳಿಸಿರುವುದು ಮೇಲಿನ ಮಸೂದೆಯ ಗುರಿಗೆ ವಿರುದ್ಧವಾದುದಾಗಿದೆ. ಅದು ಮುಂದುವರಿದು ಪೋಷಕರಿಗೆ ಧಾರ್ಮಿಕ ಶಿಕ್ಷಣದ ಕುರಿತು ಆಕ್ಷೇಪಗಳೇನಾದರೂ ಇದ್ದಲ್ಲಿ ಅವರು ತಮ್ಮ ಮಕ್ಕಳನ್ನು ಶಾಲೆಯಿಂದ ಬಿಡಿಸಿಕೊಳ್ಳಬಹುದು ಎಂದು ತಿಳಿಸಿದೆ.

ಪಂಚಾಯತ್ ಮತ್ತು ಜಿಲ್ಲಾ ಪರಿಷತ್ ಮಸೂದೆಯ ಬಗ್ಗೆ ಚರ್ಚಿಸಿದ ಸಮಿತಿಯು ಕೊನೇಪಕ್ಷ ಕೆಲವು ರೆವಿನ್ಯೂ ಮತ್ತು ಆಡಳಿತಾತ್ಮಕವಾದ ಅಧಿಕಾರಗಳನ್ನು ಮಂಡಲ ಪಂಚಾಯತ್ ಮತ್ತು ಜಿಲ್ಲಾ ಪರಿಷತ್‌ಗಳಿಗೆ ನೀಡಬೇಕಾಗಿತ್ತೆಂದು ಅಭಿಪ್ರಾಯಪಟ್ಟಿದೆ. ಆಡಳಿತದ ಈ ಪ್ರಮುಖ ಅಂಶದ ಕುರಿತಾಗಿ ಮಸೂದೆಯು ಸಂಪೂರ್ಣವಾಗಿ ಮೌನವಾಗಿದೆ,

ಮೇಲಿನ ಎರಡು ಮಸೂದೆಗಳ ಕುರಿತು ಅಧ್ಯಯನ ನಡೆಸಲು ಮತ್ತು ತಿದ್ದುಪಡಿಗಳನ್ನು ಸಿದ್ಧಪಡಿಸಿ ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷದ ವತಿಯಿಂದ ಅದನ್ನು ಸೆಲೆಕ್ಟ್ ಕಮಿಟಿಗಳಿಗೆ ಕೊಡುವ ಸಲುವಾಗಿ ರಾಜ್ಯ ಸಮಿತಿಯು ಎರಡು ಉಪಸಮಿತಿಗಳನ್ನು ನೇಮಿಸಿದೆ.

ವಿಜಯನಗರ ಉಕ್ಕು ಕಾರ್ಖಾನೆಯ ಕುರಿತು ಕೇಂದ್ರ ಸರಕಾರ ತಳೆದಿರುವ ಮಲತಾಯಿ ಧೋರಣೆಯನ್ನು ತೀವ್ರವಾಗಿ ಟೀಕಿಸಿರುವ ಸಮಿತಿ ಇದರ ವಿರುದ್ಧ ಐಕ್ಯ ಹೋರಾಟ ನಡೆಸಬೇಕೆಂದು ಕರ್ನಾಟಕದ ಜನತೆಗೆ ಕರೆ ನೀಡಿದೆ.

ಬಾಕಿ ಪಾವತಿ ಕುರಿತು ಸರ್ಕಾರವು ಕಬ್ಬು ಬೆಳೆಗಾರರಿಗೆ ನೀಡಿದ್ದ ಆಶ್ವಾಸನೆಯನ್ನು ಈಡೇರಿಸಿರುವುದಕ್ಕಾಗಿ ಸಮಿತಿಯು ರಾಜ್ಯಸರ್ಕಾರವನ್ನು ಅಭಿನಂದಿಸಿದೆ. ಅಲ್ಲದೆ ಪಿ.ಡಬ್ಲ್ಯು.ಡಿ (ಎನ್.ಎಂ.ಆರ್)ಕಾರ್ಮಿಕರ ದೀರ್ಘಕಾಲದ ಬೇಡಿಕೆಯನ್ನು ಈಡೇರಿಸಿರುವುದನ್ನು ಸಹ ಅದು ಅಭಿನಂದಿಸಿದೆ,

ಸಿ.ಪಿ.ಐ (ಎಂ)ನ ಪ್ರಧಾನ ಕಾರ್ಯದರ್ಶಿಗಳಾದ ಕಾ. ಇ.ಎಂ.ಎಸ್. ನಂಬೂದಿರಿಪಾಡ್ ಅವರು ಸಭೆಯಲ್ಲಿ ಉಪಸ್ಥಿತರಿದ್ದರು.

ಒಂದು ಯುದ್ಧ ವಿರೋಧಿ ಕವಿತೆ

ರಕ್ತ ನಮ್ಮದಿರಲಿ ಅಥವಾ ಅನ್ಯರದು
ಎಷ್ಟಾದರೂ ಮಾನವನ ರಕ್ತವದು
ಯುದ್ಧ ಪೂರ್ವದಲ್ಲಾಗಲೀ, ಪಶ್ಚಿಮದಲ್ಲಿ
ವಿಶ್ವಶಾಂತಿಯ ರಕ್ತಪಾತವದು

ಬಾಂಬು ಮನೆಮೇಲೆ ಬಿದ್ದರೆ ಅಥವಾ ಗಡಿಯಲ್ಲಿ
ನಿರ್ಮಾಣದ ಆತ್ಮವೇ ಘಾಯಗೊಳ್ಳುತ್ತದೆ.
ಹೊಲ ನಮ್ಮದೇ ಸುಡಲಿ ಅಥವಾ ಅನ್ಯರದು
ಬದುಕು ಕ್ಷಾಮಕ್ಕೆ ಸಿಲುಕಿ ಗೋಳಾಡುತ್ತದೆ.

ಟ್ಯಾಂಕು ಮುಂಬರಿಯಲಿ ಅಥವ ಹಿಮ್ಮೆಟ್ಟಲಿ
ನೆಲದ ಉದರವೇ ಬಂಜೆಯಾಗುತ್ತದೆ
ವಿಜಯೋತ್ಸಾಹವಿರಲಿ ಅಥವ ವಿಫಲತೆಯ ಶೋಕ
ಬದುಕು ಶವಗಳ ಎದುರು ಅಳುತ್ತದೆ.

ಸಮರವೇ ಸ್ವತಹ ಒಂದು ಒಗಟಾಗಿದೆ
ಅದು ಕೊಡಲಾರದು ಸಮಸ್ಯೆ ಪರಿಹಾರ
ಇಂದು ಬಿತ್ತುವುದು ಬೆಂಕಿ ನೆತ್ತರಗಳೆ
ನಾಳೆ ನೀಡುವುದು ಹಸಿವು ಹಾಹಾಕಾರ

ಆದ್ದರಿಂದ, ಓ ಸಭ್ಯ ಮಾನವರೆ,
ಯುದ್ಧ ದೂರಾದರೇನೆ ಒಳಿತು
ನಿಮ್ಮ ನಮ್ಮೆಲ್ಲರ ಅಂಗಳಗಳಲ್ಲಿ
ದೀಪ ಉರಿಯುತ್ತಿದ್ದರೆ ಒಳಿತು.

ಬನ್ನಿ ಇಂದಿನ ದ್ವೇಷಮಯ ಜಗದಲ್ಲಿ
ಚಿಂತನೆಗಳ ಬೆಳಕನ್ನು ಪಸರಿಸೋಣ.
ಯಾವುದರಿಂದ ವೃದ್ಧಿಸುವುದೋ ಶಾಂತಿ
ಅಂಥ ಸಮರಗಳನ್ನೇ ಹೂಡೋಣ.

ಸಾಹಿರ್ ಲುಧಿಯಾನ್ವಿ

ಎಸ್. ಎಫ್. ಐ. ರಾಜ್ಯ ಸಮಿತಿ ಸಭೆ

ಸೆಪ್ಟಂಬರ್ 3, 4 ಮತ್ತು 5ರಂದು ಧಾರವಾಡದಲ್ಲಿ ಗುಲ್ಬರ್ಗಾ ಮತ್ತು ಕರ್ನಾಟಕ ವಿಶ್ವ ವಿದ್ಯಾಲಯಗಳ ವ್ಯಾಪ್ತಿಯ ಪ್ರದೇಶದ ಎಸ್. ಎಫ್. ಐ. ಕಾರ್ಯಕರ್ತರಿಗೆ ಅಧ್ಯಯನ ಶಿಬಿರ ನಡೆಸಲಾಗುವುದು. ಇದೇ ಸಂದರ್ಭದಲ್ಲಿ ರಾಜ್ಯ ಸಮಿತಿಯ ಸಭೆಯು ಸಹ ನಡೆಯುತ್ತದೆ. ಎಸ್. ಎಫ್. ಐ. ನ ಅಖಿಲ ಭಾರತ ಅಧ್ಯಕ್ಷರಾದ ಕಾಮ್ರೇಡ್ ಎಂ. ಎ. ಬೇಬಿಯವರು ಶಿಬಿರದಲ್ಲಿ ಪಾಲ್ಗೊಳ್ಳುತ್ತಾರೆ.

ಮೇಲೆ ತಿಳಿಸಿದ ಪ್ರದೇಶ ವ್ಯಾಪ್ತಿಯ ಜಿಲ್ಲೆಗಳ ಕಾರ್ಯಕರ್ತರು ಮತ್ತು ಎಲ್ಲಾ ರಾಜ್ಯ ಸಮಿತಿ ಸದಸ್ಯರೂ ಸೆಪ್ಟೆಂಬರ್ 2ರಂದು ರಾತ್ರಿಯೇ ಧಾರವಾಡ ತಲುಪಬೇಕು.

ಮೈಸೂರು, ಬೆಂಗಳೂರು ಮತ್ತು ಮಂಗಳೂರು ವಿಶ್ವವಿದ್ಯಾಲಯಗಳ ವ್ಯಾಪ್ತಿಯ ಎಸ್. ಎಫ್. ಐ. ಕಾರ್ಯಕರ್ತರಿಗೆ ಸೆಪ್ಟಂಬರ್ 17, 18 ಮತ್ತು 19ರಂದು ಮೈಸೂರಿನಲ್ಲಿ ಮತ್ತೊಂದು ಪ್ರಾದೇಶಿಕ ಶಿಬಿರವನ್ನು ಏರ್ಪಡಿಸಲಾಗಿದೆ.

Printed & Published by P. Ramachandra Rao by him on behalf of the Communist Party of India (Marxist) Karnataka State Committee V. Temple Street Sultanpet, Bangalore 560053. Editorial and managerial office : L-56, K. V. Temple Street, Sultanpet, B-53. Phone : 24154 Printed at Karnataka Pressmen Associates (P) Limited, 54/1, K. R. Road, Bangalore-4 Editor: P. RAMACHANDRARAO